

# ಚಿಗುರು



ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು ।
ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ ॥
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ।
ಜಸವು ಜನಜೀವನಕೆ - ಮಂಕುತಿಮ್ಮ ॥

ದ್ವೈ ವಾರ್ಷಿಕ ಸಂಚಿಕೆ

ಸಂಪುಟ : 01 ಸಂಚಿಕೆ : 01 ಜುಲೈ-ಡಿಸೆಂಬರ್, 2016

## ಭಾಷಾ ಸಂಘದ ಸಹಯೋಗದೊಂದಿಗೆ



# ಲೇಖನಗಳ ಸಂಗ್ರಹ





ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ.) ಶಿಕಾರಿಪುರ

## ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ

(ಅನುದಾನಿತ, ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಶಾಶ್ವತ ಸಂಯೋಜಿತ ಮತ್ತು ಎನ್.ಸಿ.ಟಿ.ಇ.,
ಯು.ಜಿ.ಸಿ ಅಧಿನಿಯಮ 2 (f),ಸೆಕ್ಷನ್ 12 (B) ಮಾನ್ಯತೆ ಪಡೆದಿದೆ.
ಹಾಗೂ ನ್ಯಾಕ್‌ನಿಂದ ಸಿ.ಜಿ.ಪಿ.ಎ 2.70 ಅಂಕಗಳೊಂದಿಗೆ B ಗ್ರೇಡ್ ಮಾನ್ಯತೆ ಹೊಂದಿದೆ.

ಶಿವಮೊಗ್ಗ ರಸ್ತೆ, ಶಿಕಾರಿಪುರ – 577 427, ಶಿವಮೊಗ್ಗ ಜಿಲ್ಲೆ

☎: 08187 – 222383, 2220[illegible]7 ಮಿಂಚಂಚೆ: kumadvathibed@gmail.com

# ಭಾಷಾ ಸಂಘದ ಸದಸ್ಯರುಗಳು



ಅಮೃತ ವರ್ಷ ಎ.ಆರ್



ಅಣ್ಣಪ್ಪ ಎಸ್.ಬಾರ್ಕಿ



ಛಾಯಾ ಎಸ್. ಮಡಿವಾಳ್



ಹರೀಶ್ ಲಮಾಣಿ



ಮಂಜುನಾಥ



ಮೇಘನಾ ಎ.ಪಿ



ನವೀನ ಕುಮಾರಿ ಎನ್.ಟಿ



ಪಲ್ಲವಿ ಹೆಚ್.ಜಿ



ಪ್ರತೀಕ್ಷಾ ಎಸ್. ಗೌಡ



ರಶೀದಾಬಾನು ಕುದರಿಹಾಳ್



ಶಿಲ್ಪಾ ಪಿ



ಮೇಘನಾ ಎ.ಪಿ



ಸುಮಾ ಎ.ಆರ್

ಚಿಗುರು
ದ್ವೈ ವಾರ್ಷಿಕ ಪತ್ರಿಕೆ
ಡಿಸೆಂಬರ್ 2016.
ಸಂಪುಟ : 01 ಸಂಚಿಕೆ : 01


**ಅಧ್ಯಕ್ಷರು**

**ಡಾ. ಜಯಶ್ರೀ ವಿ.ಆರ್**
ಪ್ರಾಚಾರ್ಯರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

**ಪ್ರಧಾನ ಸಂಪಾದಕರು :**

**ಶ್ರೀ ವೀರೇಂದ್ರ ಕುಮಾರ ವಾಲಿ ಎಸ್..**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

**ಶ್ರೀ ರವಿ ಹೆಚ್..**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

**ಸಹ ಸಂಪಾದಕರು :**

ಭಾಷಾ ಸಂಘದ ಸರ್ವಸದಸ್ಯರು.

ಚಿಗುರು
ದ್ವೈ ವಾರ್ಷಿಕ ಪತ್ರಿಕೆ
ಭಾಷಾ ಸಂಘ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ.
ಶಿಕಾರಿಪುರ
ಶಿಕಾರಿಪುರ 577-427
ಫೋನ್ : 08187 – 222067
Email :
kumadvathibed@gmail.com


# ಪರಿವಿಡಿ


| ಕ್ರಮ ಸಂಖ್ಯೆ | ಸಂಗತಿಗಳು | ಪುಟ ಸಂಖ್ಯೆ |
|---|---|---|
| 01 | ಶಬ್ದೋತ್ಪತ್ತಿ ಮತ್ತು ಸಂಬಂಧ | 01 |
| 02 | ಹಣಗಳಿಕೆಯೇ ಜೀವನದ ಯಶಸ್ಸು | 02 |
| 03 | ಕನ್ನಡದ ಶಿಲಾಶಾಸನಗಳು | 03 |
| 04 | ಪ್ರಮುಖ 60 ಪಿತಾಮಹರುಗಳು | 04-06 |
| 05 | ಸಾಮಾನ್ಯ ಜ್ಞಾನ | 07 |
| 06 | ಜನಪದ ಸಾಹಿತ್ಯ | 08 |
| 07 | ಕನ್ನಡ ಸಾಹಿತ್ಯ ಸಮ್ಮೇಳನಗಳು | 09-12 |
| 08 | ಅಕ್ಷರ ಮಾಲೆ ಶಿಕ್ಷಕ | 13 |
| 09 | ಹಾಸ್ಯ | 14 |
| 10 | ಜ್ಞಾನಪೀಠ ಪ್ರಶಸ್ತಿಗಳು | 15-16 |
| 11 | ಕನ್ನಡದ ಮೊದಲುಗಳು | 17 |
| 12 | ವಚನಕಾರ್ತಿ ಸತ್ಯಕ್ಕ | 18-19 |
| 13 | ಕುವೆಂಪು | 20-26 |

ಸಿರಿಗನ್ನಡಂಗೆಲ್ಗೆ ಸಿರಿಗನ್ನಡಂಬಾಳ್ಗೆ



# ಶಬ್ದೋತ್ಪತ್ತಿ ಮತ್ತು ಸಂಬಂಧ

ಮಾನವ ಆವಿಷ್ಕಾರಗಳಲ್ಲಿ ಭಾಷೆಯಷ್ಟು ಅದ್ಭುತವಾದದ್ದು, ಮಹತ್ವಪೂರ್ಣವಾದುದು ಬೇರೊಂದಿಲ್ಲ ಎನ್ನುವುದು ಡಾರ್ವಿನ್ ತತ್ವಜ್ಞಾನಿಯ ಅಭಿಪ್ರಾಯ. ಕೇವಲ 'ಅನುಕರಣೆ' ಇಂದ ಮಾತ್ರದಿಂದ ವಶವಾಗುವ ಭಾಷೆಯ ಅದ್ಭುತವನ್ನು ಕುತೂಹಲವನ್ನು ನಾವು ಅರಿತಿಲ್ಲ. ಆದ್ದರಿಂದ ಪ್ರಸ್ತುತ ವರ್ತಮಾನದಲ್ಲಿ ಭಾಷಾ ಅಭ್ಯಾಸವೇ ಗೌಣವೆನ್ನಿಸಿದರೆ "ಜ್ಞಾನವೇ" ಗೌಣವಾಗುತ್ತದೆ.

ಯಾವುದೇ ಭಾಷೆಯ ಸ್ವರೂಪ ಸಿದ್ಧವಾಗುವುದು ಅದರ ವರ್ಣವ್ಯವಸ್ಥೆಯ ಮೇಲೆ ಆಗಿದೆ. ಒಂದು ಭಾಷೆಯ ಮೂಲ ದ್ರವ್ಯವೇ ಅದರ "ವರ್ಣಮಾಲೆ" ಆದ್ದರಿಂದ ಭಾಷಾ ಅಭ್ಯಾಸ ಪ್ರಾರಂಭವಾಗುವುದೇ ಆದರೆ ವರ್ಣವ್ಯವಸ್ಥೆಯಿಂದ ಎನ್ನಿಸಿದೆ. ಕನ್ನಡದ ಶ್ರೇಷ್ಠ ವೈಯ್ಯಾಕರಣಿಯಾದ ಕೇಶಿರಾಜ ಹದಿಮೂರನೇ ಶತಮಾನದಷ್ಟು ಹಿಂದೆಯೇ ವರ್ಣಗಳು ಎಲ್ಲಿ? ಹೇಗೆ? ಹುಟ್ಟುತ್ತವೆ ಎಂಬುದನ್ನು ತೀರ ವೈಜ್ಞಾನಿಕವಾಗಿ ವಿಶ್ಲೇಷಿಸಿ ವಿಷಾದ ವ್ಯಕ್ತಪಡಿಸಿದ್ದಾನೆ.

ಶಬ್ದೋತ್ಪತ್ತಿಯ ಕುರಿತು ಕೇಶಿರಾಜ ಹದಿಮೂರನೇ ಶತಮಾನಕ್ಕೆ ಹೇಳಿರುವ ಸೂತ್ರ ಪದ್ಯ ಇಂತಿದೆ. –

> ಅನುಕೂಲ ಪವನನಿಂ ಜೀ/
> ವನಿಷ್ಟದಿಂದಂ ನಾಭಿಮೂಲದೊಳ್ ಕಹಳೆಯ ಪಾಂ/
> ಗಿನವೋಲ್ ಶಬ್ದ ದ್ರವ್ಯಂ/
> ಜನಿಯಿಸುಗುಂ ಶ್ವೇತ ಮದವಿ ಕಾರ್ಯಂ ಶಬ್ದಂ//

ಸೂತ್ರಾರ್ಥ: ಜೀವಾತ್ಮನ ಇಷ್ಟದಂತೆ ಅಗತ್ಯವಾದಷ್ಟು ಪ್ರಾಣವಾಯುವಿನ ಸಹಾಯದಿಂದ ನಾಭಿಯ ಮೂಲದಲ್ಲಿ ಎತ್ತಿದ ಕಹಳೆಯಾಕಾರದಲ್ಲಿ ಶಬ್ಧವೆಂಬ ದ್ರವ್ಯ ಧವಳವರ್ಣವಾಗಿ ಹುಟ್ಟುತ್ತದೆ.

ಶಬ್ದ ಮೂಲವಾದ ವರ್ಣ, ವರ್ಣಕಾರಣವಾದ ನಾದ, ನಾಭಿಯ ಮೂಲದಲ್ಲಿ ಹುಟ್ಟಿ ಭಾವವಾಗಿ ಮಾರ್ಪಟ್ಟು ನಂತರ ಭಾಷೆಯಾಗಿ ಬಾಯಿಯ ಮೂಲಕ ಹೊರಬರುತ್ತದೆ. ಭಾಷೆಯ ಉದ್ದೇಶ 'ಸಂವಹನ' ಅರ್ಥಾತ್ 'ವಿನಿಮಯ' ಇದರ ಜೊತೆಯಲ್ಲಿ ಭಾಷೆ ನಿರ್ಜೀವವಲ್ಲ ಅದೊಂದು ಸಂಸ್ಕೃತಿವಾಹಕ ಅದನ್ನೇ ರಾಘವಾಂಕ 'ಕುಲವನಾಲಿಗೆಯ ನರುಹಿತು' ಎನ್ನುತ್ತಾರೆ. ಅದನ್ನೇ ಗ್ರಾಮೀಣರು 'ಭಾಷೆ ಇದ್ದರೆ ತಾಯಿ ಇದ್ದಂತೆ ಎಂದರು. ಭಾಷೆಯ ನಿಜ ಉದ್ದೇಶ ಮನುಷ್ಯ ಸಂಬಂಧವನ್ನು ಭದ್ರಗೊಳಿಸುವುದು.

ಪಲ್ಲವಿ ಹೆಚ್.ಜಿ
ಪ್ರಶಿಕ್ಷಣಾರ್ಥಿ

## ಹಣಗಳಿಕೆಯೇ ಜೀವನದ ಯಶಸ್ಸು

ಆಧುನಿಕ ಕಾಲದವೇ ಹಣದ ಮೇಲೆ ನಿಂತಿದೆ. ಹಣವಿಲ್ಲದಿದ್ದರೆ ಜೀವನವೇ ಇಲ್ಲ ಎನ್ನುವಂತ ವಾತಾವರಣ ನಿರ್ಮಾಣವಾಗಿದೆ. ದಿನನಿತ್ಯದ ಕೆಲಸಗಳು ಕೂಡ ಹಣದ ಮೇಲೆ ನಿಂತಿದೆ "ಹಣವನ್ನು ಕಂಡರೆ ಹೆಣ ಕೂಡ ಬಾಯಿ ಬಿಡುತ್ತದೆ" ಎಂಬ ಗಾದೆಯಂತೆ ಹಣವೆಂದರೆ ಯಾರಿಗೆ ಬೇಡ. ಯಾರಿಗೆ ತಾನೆ ಆಸೆ ಇಲ್ಲ? ದುಡ್ಡೇ ದೊಡ್ಡಪ್ಪ ಎಂಬ ವಾಕ್ಯವು ಕೂಡ ಇದೆ. ಆಸೆ ಎಂಬ ಮನುಷ್ಯ ಕೆಟ್ಟಗುಣಕ್ಕೆ ಹಣ ಸಾಧನವಾಗಿದೆ. ನಾವು ಓದಿ ಶಿಕ್ಷಣ ಪಡೆಯುವುದು ನಮ್ಮ ಆಸೆಯನ್ನು ಪೂರೈಸಿಕೊಳ್ಳುವುದಕ್ಕೆ ಅಲ್ಲವೇ!

ಈಗಿನ ಕಾಲದಲ್ಲಿ ನಾವು ಸಣ್ಣ ಮಕ್ಕಳ ಹತ್ತಿರ ಹೋಗಿ ನೀನು ಮುಂದೆ ಏನಾಗಬೇಕಪ್ಪಾ ಎಂದು ಯಾರಾದರೂ ಕೇಳಿದರೆ ಆಗ ಆ ಮಕ್ಕಳು ನಾನು ವೈದ್ಯನಾಗಬೇಕು, ಇಂಜಿನಿಯರ್ ಆಗಬೇಕು, ಎಂದು ಹೇಳುತ್ತಾರೆ. ಅಲ್ಲದೇ, ವೈದ್ಯ ಇಂಜಿನಿಯರ್ ಆಗಿ ಏನು ಮಾಡುತ್ತೀಯೆ ಎಂದು ಕೇಳಿದರೆ ನಾನು ಹಣವನ್ನು ಸಂಪಾದಿಸಿ ಕಾರು, ಮನೆ, ಸೈಟು ಇತ್ಯಾದಿಗಳನ್ನು ಕೊಂಡು ಶ್ರೀಮಂತನಾಗಬೇಕೆಂದು ಹೇಳುತ್ತಾರೆ. ಇದರ ಅರ್ಥ ನಾವು ಓದುತ್ತಿರುವುದು ಹಣದ ಗಳಿಕೆಗಾಗಿ, ಜೀವನದ ಸಾರ್ಥಕತೆಗಲ್ಲ, ಎಂದು ಇದರಲ್ಲಿಯೇ ಎದ್ದು ಕಾಣುತ್ತಿದೆ. ಹಣದ ಆಸೆಯ ಹಿಂದೆ ಬಿದ್ದು ಎಷ್ಟೋ ಜನ ಜೀವಕಳೆದುಕೊಂಡಿದ್ದೂ ಇದೆ. ಈ ಹಣಗಳಿಕೆಯ ಆಸೆ ಮನುಷ್ಯನನ್ನು ಎಂತಹ ಕ್ರೂರ ಕೆಲಸಕ್ಕಾದರೂ ದೂಡಿಬಿಡುತ್ತದೆ.

ಹಣಗಳಿಸಬೇಕೆಂಬುದು ಒಳ್ಳೆಯ ಉದ್ದೇಶವೇ ಆದರೆ ಅದು ನ್ಯಾಯವಾಗಿ ಇರಬೇಕು. ಎಷ್ಟೋ ಜನ ಹಣಗಳಿಕೆಗಾಗಿ ಸಮಾಜವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದನ್ನು ನಾವು ಪ್ರತಿನಿತ್ಯ ಟಿ.ವಿ. ಪತ್ರಿಕೆಯಲ್ಲಿ ನೋಡುತ್ತೇವೆ ಹಾಗೂ ಓದುತ್ತೇವೆ. ಹಣಗಳಿಕೆ ಜೀವನದ ಯಶಸ್ಸಿನ ಒಂದು ಭಾಗ ಎಂದು ನಾನೂ ನಂಬುತ್ತೇನೆ. ಆದರೆ ಹಣದಿಂದ ಮಾತ್ರ ನಾವು ಪ್ರೀತಿ, ವಿಶ್ವಾಸ, ಗೌರವಗಳನ್ನು ಗಳಿಸಲು ಸಮಾಜದಲ್ಲಿ ನೆರೆ-ಹೊರೆಯವರಿಗೆ ಪ್ರೀತಿ ಪಾತ್ರರಾಗಲೂ ಸಾಧ್ಯವಿಲ್ಲ. ಹಣಗಳಿಕೆಯಲ್ಲದೇ ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸರಂತೆ ಸಮಾಜಕ್ಕೆ ಕೊಡುಗೆ ನೀಡಬೇಕು.

ಇಂತಹ ಮಹಾನ್ ವ್ಯಕ್ತಿಗಳ ತರಹ ಸಮಾಜದ ಉದ್ಧಾರಕ್ಕೆ ದುಡಿಯಬೇಕು. ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ತಂದೆ ತಾಯಿಯರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಆಗ ಮಾತ್ರ ಹಣಗಳಿಸಿದ್ದಕ್ಕೆ ಸಾರ್ಥಕವಾಗುತ್ತದೆ. ನಿಜವಾದ ಯಶಸ್ಸು ಲಭಿಸುತ್ತದೆ.

ಸುಮ ಎ.ಆರ್
ಪ್ರಶಿಕ್ಷಣಾರ್ಥಿ

# ಕನ್ನಡದ ಶಿಲಾ ಶಾಸನಗಳು

## ಪರಿಚಯ ( ಶಿಲಾ ಶಾಸನಗಳು)

- ಹಲ್ಮಿಡಿ ಗ್ರಾಮದಲ್ಲಿ ಹಲ್ಮಿಡಿ ಶಿಲಾಶಾಸನ (ಹಳೆಗನ್ನಡ) ಕ್ರಿ.ಶ.540 (ಕದಂಬ ಸಾಮ್ರಾಜ್ಯ)
- ಹಳೆಗನ್ನಡದಲ್ಲಿರುವ ಶಿಲಾಶಾಸನ ಕ್ರಿ.ಶ.578 (ಬಾದಾಮಿಚಾಲುಕ್ಯರು) ಬಾದಾಮಿ ಗುಹೆ)
- ಹಳೆಗನ್ನಡದಲ್ಲಿರುವ ಶಿಲಾಶಾಸನ ಕ್ರಿ.ಶ.726 ತಲಕಾಡುರಾಜ ಶಿವಮೂರನದೋ. ಶ್ರೀಮರುಷನದ್ದೋ ಕಾಲ (ಪಶ್ಚಿಮ ಗಂಗ ಸಾಮ್ರಾಜ್ಯ)
- ಹಳೆಗನ್ನಡದಲ್ಲಿರುವ ಶಿಲಾಶಾಸನ ಕ್ರಿ.ಶ.9ನೇಯ ಶತಮಾನ (ರಾಷ್ಟ್ರಕೂಟ ಸಾಮ್ರಾಜ್ಯ) ದುರ್ಗೆಯಗುಡಿ. ಹಂಪಿ.
- ಮಂಡ್ಯ ಜಿಲ್ಲೆಯ ಅಬಕೂರು ಶಿಲಾಶಾಸನ (ಕ್ರಿ.ಶ.949) 2 ಭಾಗಗಳ ರಚನೆ. ನಾಯಿ ಮತ್ತು ಕಾಡುಹಂದಿಯ ಪರಸ್ಪರ ಯುದ್ಧವನ್ನು ಚಿತ್ರಿಸುವ ಶಿಲಾಶಾಸನ ತಕ್ಕೋಳ ಯದ್ಧದಲ್ಲಿ ಚೋಳ ಸಾಮ್ರಾಜ್ಯದ ಮೇಲೆ ರಾಷ್ಟ್ರಕೂಟರು ಜಯ ಸಾಧಿಸಿದುದನ್ನು ಸೂಚಿಸುತ್ತದೆ.
- ಪಶ್ಚಿಮ ಚಾಲುಕ್ಯ 1 ನೇಯ ಸೋಮಶೇಖರನ ಬಳ್ಳಾರಿ ಜಿಲ್ಲೆಯ ಹಿರಿಯ ಹಡಗಲಿಯಕಲ್ಲೇಶ್ವರದೇವಸ್ಥಾನದಲ್ಲಿರುವ ಹಳೆಗನ್ನಡ ಶಿಲಾಶಾಸನ ಕ್ರಿ.ಶ.1057.
- ಕೊಪ್ಪಳ ಜಿಲ್ಲೆಯಇಟಗಿ ಮಹಾದೇವದೇವಸ್ಥಾನದಲ್ಲಿರುವ ಪಶ್ಚಿಮ ಚಾಲುಕ್ಯ 6 ನೇಯ ವಿಕ್ರಮಾದಿತ್ಯನಕಾಲದ ಹಳೆಗನ್ನಡ ಶಿಲಾಶಾಸನ ಕಾಲ ಕ್ರಿ.ಶ.1112.
- ಹಾಸನ ಜಿಲ್ಲೆಯ ಅರಸಿಕೆರೆ ಪಟ್ಟಣದಈಶ್ವರದೇವಸ್ಥಾನದಲ್ಲಿರುವ ಹಳೆಗನ್ನಡ ಶಿಲಾಶಾಸನ ಕಾಲ ಕ್ರಿ.ಶ.1220(ಹೊಯ್ಸಳ ಸಾಮ್ರಾಜ್ಯ).
- ಹಂಪಿ ವಿರೂಪಾಕ್ಷ ದೇವಸ್ಥಾನದಲ್ಲಿರುವ ಕೃಷ್ಣದೇವರಾಯರ (ವಿಜಯನಗರ ಸಾಮ್ರಾಜ್ಯ) ಪಟ್ಟಾಭಿಷೇಕದ ಬಗೆಗಿನ ಶಿಲಾಶಾಸನ.
- ಅಸಮಾನ್ಯ ಸೌಂದರ್ಯದಿಂದ ಶೋಭಿಸುವ ಯಳಂದೂರಿನಲ್ಲಿರುವ ಕ್ರಿ.ಶ.1654ರ ಶಿಲಾಶಾಸನ.

ಛಾಯಾ ಎಸ್.ಎಂ
ಪ್ರಶಿಕ್ಷಣಾರ್ಥಿ

# ಪ್ರಮುಖ 60 ಪಿತಾಮಹರುಗಳು

- ವಿಜ್ಞಾನದ ಪಿತಾಮಹ – ರೋಜರ್ ಬೇಕನ್
- ಜೀವಶಾಸ್ತ್ರದ ಪಿತಾಮಹ – ಅರಿಸ್ಟಾಟಲ್
- ಓಲಂಪಿಕ ಪಂದ್ಯಗಳ ಪಿತಾಮಹ - ಪಿಯರನ್ ದಿ ಕೂಬರ್ತಿನ್
- ಭಾರತದ ಪತ್ರಿಕೋದ್ಯಮರಂಗದ ಪಿತಾಮಹ – ಅಗಸ್ಟ ಹಿಕ್ಕಿಸ್
- ಆಧುನಿಕ ವರ್ಗೀಕರಣ ಶಾಸ್ತ್ರದ ಪಿತಾಮಹ – ಕರೋಲಸ್ ಲಿನಿಯಸ್
- ಭಾರತೀಯ ಸಾರ್ವಜನಿಕ ಸೇವೆಯ ಪಿತಾಮಹ – ಕಾರ್ನವಾಲಿಸ್
- ಮನೋವಿಶ್ಲೇಷಣಾ ಪಂಥ ಪಿತಾಮಹ - ಸಿಗ್ಮಂಡ ಪ್ರಾಯ್ಡ್
- ಮೋಬೈಲ್ ಪೋನಿನ ಪಿತಾಮಹ – ಮಾರ್ಟಿನ್‌ಕೂಪರ್
- ಹೋಮಿಯೋ ಪತಿಯ ಪಿತಾಮಹ - ಸ್ಯಾಮ್ಯುಯಲ್ ಹಾನಿಯನ್
- ಭಾರತೀಯ ವೈದ್ಯಶಾಸ್ತ್ರದ ಪಿತಾಮಹ – ಧನ್ವಂತರಿ
- ಕರ್ನಾಟಕದ ಪತ್ರಿಕೋದ್ಯಮದ ಪಿತಾಮಹ – ಮೊಗ್ಲಿಂಗ್
- ಇಮೇಲ್ ನ ಪಿತಾಮಹ - ಸಭಿರಾ ಭಟಿಯಾ
- ಆಧುನಿಕ ಬುದ್ಧಿಶಕ್ತಿ ಪರಿಕ್ಷೆಯ ಪಿತಾಮಹ – ಆಲ್ ಪ್ರೆಡ ಬೀಲಿ
- ಆಧುನಿಕಕ್ಷಿಪಣಿತಂತ್ರಜ್ಞಾನದ ಪಿತಾಮಹ - ಟಿಪ್ಪು ಸುಲ್ತಾನ್
- ವೈದ್ಯಕೀಯಕ್ಷೇತ್ರದ ಪಿತಾಮಹ - ಸುಶ್ರುತ್
- ಭಾರತಿಯ ಹಸಿರು ಕ್ರಾಂತಿಯ ಪಿತಾಮಹ – ಎಂ.ಎಸ್. ಸ್ವಾಮಿನಾಥನ್
- ಭಾರತೀಯಕೈಗಾರಿಕಾರಂಗದ ಪಿತಾಮಹ – ಜೆಮ್ ಷೆಡ ಜಿ ಡಾಟಾ
- ಭಾರತದಅಣು ವಿಜ್ಞಾನದ ಪಿತಾಮಹ - ಹೋಮಿಜಾಹಂಗೀರ್ ಬಾಬಾ
- ರೈಲ್ವೆಯ ಪಿತಾಮಹ - ಸ್ಟಿಫನ್ ಥಾಮಸ್
- ಭಾರತೀಯ ಶ್ವೇತಾಕ್ರಾಂತಿಯ ಪಿತಾಮಹ – ವರ್ಗೀಸ್‌ಕುರಿನ್
- ಏಷಿಯನ್‌ಕ್ರೀಡೆಯ ಪಿತಾಮಹ – ಜೆ.ಡಿ. ಸೊಂಧಿ
- ವೈಜ್ಞಾನಿಕ ಸಮಾತಾವಾದದ ಪಿತಾಮಹ – ಕಾರ್ಲ ಮಾರ್ಕ್ಸ
- ಭಾರತೀಯ ಆರ್ಥಿಕ ಯೋಜನೆಯ ಪಿತಾಮಹ - ಪಿ.ವಿ.ನರಸಿಂಹ ರಾವ

- ಭಾರತೀಯ ಚಲನಚಿತ್ರರಂಗದ ಪಿತಾಮಹ – ದಾದಾ ಸಾಹೇಬ್ ಪಾಲ್ಕೆ
- ಕರ್ನಾಟಕ ಸಂಗಮ ಸಂಗೀತದ ಪಿತಾಮಹ – ಶಿಶುನಾಳ ಷರೀಪ್
- ಭಾರತೀಯ ಜ್ಯೋತಿಷ್ಯ ಶಾಸ್ತ್ರದ ಪಿತಾಮಹ – ರಾಟ್ಲಲ್
- ಭಾರತೀಯ ರೈಲ್ವೆಯ ಪಿತಾಮಹ – ಲಾರ್ಡ್‌ಡಾಲ್ ಹೌಸಿ
- ಆಯುರ್ವೇದದ ಪಿತಾಮಹ – ಚರಕ್
- ಯೋಗಾಸನದ ಪಿತಾಮಹ – ಪತಂಜಲಿ ಮಹರ್ಷಿ
- ಭಾರತದ ವಿದೇಶಾಂಗ ನೀತಿಯ ಶಿಲ್ಪಿ – ಜವಹರಲಾಲ್ ನೆಹರೂ
- ಕರ್ನಾಟಕ ಶಾಸ್ತ್ರೀಯ ಸಂಗೀತದ ಪಿತಾಮಹ – ಪುರಂದರದಾಸರು
- ಆಧುನಿಕ ಕರ್ನಾಟಕದ ಶಿಲ್ಪಿ – ಸರ್.ಎಂ.ವಿಶ್ವೆಶ್ವರಯ್ಯ
- ಭಾರತ ಶಾಸನದ ಪಿತಾಮಹ – ಅಶೋಕ
- ಕರ್ನಾಟಕದ ಶಾಸನದ ಪಿತಾಮಹ – ಬಿ.ಎಲ್.ರೈಸ್
- ಪ್ರತಿ ಸುಧಾರಣ ಚಳುವಳಿಯ ಪಿತಾಮಹ – ಇಗ್ನೆಷಿಯಸ್ ಲಯೋಲ
- ಸಂಸ್ಕೃತಿಕ ಭೂಗೋಳ ಶಾಸ್ತ್ರದಪಿತಾಮಹ – ಲಾಟಿನ್ ಸಾಚ್
- ಗದ್ಯ ಶಾಸ್ತ್ರದಪಿತಾಮಹ – ಡಾಂಟೆ
- ಪದ್ಯ ಶಾಸ್ತ್ರದಪಿತಾಮಹ – ಪೆಟ್ರಾರ್ಕ
- ಭಾರತದ ನ್ಯೂಕ್ಲಿಯರ ಕಾರ್ಯಕ್ರಮದ ಪಿತಾಮಹ – ಹೋಮಿ ಜಹಾಂಗೀರ್ ಬಾಬಾ
- ಭಾರತದ ಇತಿಹಾಸದ ಪಿತಾಮಹ – ಕಲ್ಹಣ
- ಕರ್ನಾಟಕದ ಸಮಾಜ ಶಾಸ್ತ್ರದ ಪಿತಾಮಹ – ಎಂ.ಎನ್. ಶ್ರೀನಿವಾಸ್
- ಭಾರತದ ಕ್ಷಿಪಣಿಗಳ ಪಿತಾಮಹ – ಎ.ಪಿ.ಜೆ.ಅಬ್ದುಲ್ ಕಲಾಂ
- ನೀಲ ಕ್ರಾಂತಿಯ ಪಿತಾಮಹ – ಶ್ಯಾಮ ಪಿತ್ರೋಡಾ
- ಕನ್ನಡದಕಾವ್ಯ ಪಿತಾಮಹ – ಪಂಪ
- ಕನ್ನಡ ಚಳುವಳಿಯ ಪಿತಾಮಹ – ಅ.ನ.ಕೃಷ್ಣರಾಯ
- ವಚನ ಸಂಪಾದನೆಯ ಪಿತಾಮಹ – ಫ.ಗು.ಹಳಕಟ್ಟಿ
- ಕರ್ನಾಟಕದ ಪ್ರಹಸನದ ಪಿತಾಮಹ – ಟಿ.ಪಿ.ಕೈಲಾಸಂ

- ಕಾದಂಬರಿಯ ಪಿತಾಮಹ – ಗಳಗನಾಥ
- ಹೊಸಗನ್ನಡ ಸಾಹಿತ್ಯದ ಪಿತಾಮಹ – ಬಿ.ಎಮ್.ಶ್ರೀಕಂಠಯ್ಯ
- ಕರ್ನಾಟಕದಜಾನಪದ ಸಾಹಿತ್ಯದ ಪಿತಾಮಹ – ಜಿ.ಎಮ್.ಪರಮಶಿವಯ್ಯ
- ಆಧುನಿಕಕನ್ನಡ ನಿಘಂಟಿನ ಪಿತಾಮಹ – ಜಿ.ವೆಂಕಟಸುಬ್ಬಯ್ಯ
- ಕನ್ನಡ ಸಾಹಿತ್ಯದ ನವ್ಯ ನಾಟಕದ ಪಿತಾಮಹ – ಟಿ.ಪಿ.ಕೈಲಾಸಂ
- ಫೇಸಬುಕ್‌ನ ಪಿತಾಮಹ – ಮಾರ್ಕಜಂಗರ್ ಬರ್ಗ
- ಇಂಗ್ಲೀಷ್ ಕಾವ್ಯದ ಪಿತಾಮಹ – ಜಿಯಾ ಪ್ರೈರಿಜಾಸರ್
- ಆಧುನಿಕ ಯೋಗದ ಪಿತಾಮಹ – ಬೆಳ್ಳೂರು ಕೃಷ್ಣಮಾಚಾರ.
  ಸುಂದರ್‌ರಾಜ್ ಅಯ್ಯಂಗಾರ್
- ಕನ್ನಡದ ಸಣ್ಣ ಕಥೆಗಳ ಪಿತಾಮಹ – ಪಂಜೆ ಮಂಗೇಶರಾಯರು
- ರಾಷ್ಟ್ರ ಪಿತಾಮಹ – ಮಹಾತ್ಮ ಪುಲೆ
- ಆಧುನಿಕ ಶೈಕ್ಷಣಿಕ ಮನೋವಿಜ್ಞಾನದ ಪಿತಾಮಹ – ಥಾರ್ನಡೈಕ್
- ಪಾಶ್ಚಿಮಾತ್ಯ ವೈದ್ಯಶಾಸ್ತ್ರದ ಪಿತಾಮಹ – ಹಿಪ್ಪೋಕ್ರೇಟ್ಸ
- ಭಾರತದ ರಸಾಯನಿಕ ಪಿತಾಮಹ – 2 ನೇ ನಾಗಾರ್ಜುನ

ಅಮೃತವರ್ಷಾ
ಪ್ರಶಿಕ್ಷಣಾರ್ಥಿ

## ಸಾಮಾನ್ಯಜ್ಞಾನ

| | | |
|---|---|---|
| 1. ಕನ್ನಡ ಸಾಹಿತ್ಯಕ್ಕೆ ಪ್ರಥಮ ಬಾರಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿಸಿಕೊಟ್ಟವರು | – | ಕುವೆಂಪು. |
| 2. ಕರ್ನಾಟಕದಲ್ಲಿ ರಿಸರ್ವ್ ಬ್ಯಾಂಕ ನೋಟನ್ನು ಮುದ್ರಿಸುವ ನಗರ | – | ಮೈಸೂರು |
| 3. ಕರ್ನಾಟಕದ ಅತ್ಯಂತ ಎತ್ತರದ ಶಿಖರ | – | ಮುಳ್ಳಯ್ಯನಗಿರಿ (ಚಿಕ್ಕಮಗಳೂರು) |
| 4. ಕರ್ನಾಟಕದ ಅತ್ಯಂತ ದೊಡ್ಡಕೆರೆ | – | ಶಾಂತಿ ಸಾಗರ (ಚೆನ್ನಗಿರಿತಾಲೂಕು) |
| 5. ಕನ್ನಡದ ಆದಿ ಕವಿ | – | ಪಂಪ |
| 6. ಕನ್ನಡದ ಮೊದಲ ಅಲಂಕಾರಿಕ ಗ್ರಂಥ | – | ಕವಿರಾಜಮಾರ್ಗ |
| 7. ಭಾರತದ ಅತಿ ಹೆಚ್ಚು ಕಾಫಿ ಬೆಲೆಯುವ ರಾಜ್ಯ | – | ಕರ್ನಾಟಕ |
| 8. 1902 ರಲ್ಲಿ ಮೊದಲ ಬಾರಿಗೆ ವಿದ್ಯುತ್ ದೀಪಗಳ ಸಂಪರ್ಕ ಪಡೆದ ಪ್ರದೇಶ | – | ಕೋಲಾರದ ಚಿನ್ನದಗಣಿ |
| 9. ಭಾರತದಲ್ಲೇ ಅತಿ ಹೆಚ್ಚಿನ ರೇಷ್ಮೆ ಉತ್ಪಾದಕ ರಾಜ್ಯ | – | ಕರ್ನಾಟಕ |
| 10. ಭಾರತರತ್ನ ಪ್ರಶಸ್ತಿ ಪಡೆದ ಪ್ರಥಮ ಕನ್ನಡಿಗ | – | ಸರ್.ಎಮ್.ವಿಶ್ವೇಶ್ವರಯ್ಯ |
| 11. ಕನ್ನಡದ ಅತ್ಯಂತ ಪ್ರಾಚೀನ ಗದ್ಯ ಕೃತಿ | – | ವಡ್ಡಾರಾಧನೆ |
| 12. ಕನ್ನಡದ ಮೊದಲ ಸಿನಿಮಾ ಸ್ಕೋಪ್ ವರ್ಣಚಿತ್ರ | – | ಸೊಸೆ ತಂದ ಸೌಭಾಗ್ಯ |
| 13. ಕರ್ನಾಟಕದ ಅತಿದೊಡ್ಡ ವಿವಿದ್ದೋದ್ದೇಶ ನದಿ ಕಣಿವೆ ಯೋಜನೆ | – | ಕೃಷ್ಣ ಮೇಲ್ದಂಡೆ |
| 14. ಕರ್ನಾಟಕದ ಅಣು ವಿದ್ಯುಚ್ಛಕ್ತಿ ಘಟಕ ಇರುವುದು | – | ಕೈಗಾ (ಉತ್ತರಕನ್ನಡ ಜಿಲ್ಲೆ) |
| 15. ರಾಷ್ಟ್ರಪತಿ ಪ್ರಶಸ್ತಿ ಪಡೆದ ಪ್ರಥಮ ಕನ್ನಡ ಗಾಯಕ | – | ಶಿವಮೊಗ್ಗ ಸುಬ್ಬಣ್ಣ |
| 16. ಕನ್ನಡದ ಮೊದಲ ದಿನ ಪತ್ರಿಕೆ | – | ಸೂರ್ಯೋದಯ ಪ್ರಕಾಶಿತ |
| 17. ಯುದ್ಧದಲ್ಲಿ ಪ್ರಥಮ ಬಾರಿಗೆ ಕ್ಷಿಪಣಿ ಪ್ರಯೋಗ ಮಾಡಿದ ಕನ್ನಡದ ಧೀರ | – | ಶಹಿದೇ ಮಿಲ್ಲತ್ ಟಿಪ್ಪು ಸುಲ್ತಾನ್ |
| 18. ಗಾಂಧೀಜಿಯವರು ತಂಗಿದ್ದ ಕರ್ನಾಟಕದ ಗಿರಿಧಾಮ | – | ನಂದಿದುರ್ಗ |
| 19. ಕರ್ನಾಟಕ ಶಾಸನ ಪಿತಾಮಹ | – | ಬಿ.ಎಲ್.ರೈಸ್ |

ಅಣ್ಣಪ್ಪ ಎಸ್.ಬಾರ್ಕಿ
ಪ್ರಶಿಕ್ಷಣಾರ್ಥಿ

## ಜನಪದ ಸಾಹಿತ್ಯ

ಜನಪದ ಸಾಹಿತ್ಯವನ್ನು ಗೀತೆ. ಮಹಾಕಾವ್ಯ. ಖಂಡಕಾವ್ಯ. ಲಾವಣಿಗಳು. ಕಥನಗೀತೆ. ಗೀಗೀ ಪದ. ರಂಗಪದ. ಕೋಲಾಟದ ಪದ. ಸೋಬಾನೆ ಪದ. ಕೊಂತಮ್ಮನ ಪದ. ಹಂತಿಪದ. ಡೊಳ್ಳಿನ ಪದ. ಜನಪದ ಕಥೆ. ಒಗಟು. ಗಾದೆಗಳು ಇತ್ಯಾದಿಯಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡುವುದು ಸೂಕ್ತವಾಗಿದೆ. ಜನಪದ ಗೀತೆ ಅನಕ್ಷರಸ್ಥರನ್ನು ವಾಕ್ ಪರಂಪರೆಯನ್ನಾಗಿ ಸೃಷ್ಟಿಸಿಕೊಂಡು ಬೆಳೆದು ಬಂದ ವ್ಯಕ್ತಿತ್ವ ವಿಕಾಸದ ಮಾಧ್ಯಮ ಜನಹಿತಕ್ಕೆ ದಕ್ಕೆಯಾಗದಂತೆ ಸಮಾಜಕ್ಕೆ ಸವಿಯಾಗುವಂತೆ ಬೆಳಗುವ ದರ್ಶನ ಜನಪದ ಗೀತೆಯಲ್ಲಿದೆ.

ಮಾನಸಿಕ ತುಮುಲಗಳು. ಕುಟುಂಬ ಮತ್ತು ಸಮಾಜದೊಳಗೆ ಎದುರಾಗುವ ಕಷ್ಟ-ಸುಖಗಳು. ಶಾಂತಿ-ಸಮಾಧಾನವನ್ನು ಧಾರೆಯೆರೆಯುವ ದೈವಿಸಂಭೂತ ನಿದರ್ಶನಗಳಾಗಿವೆ. ದೈವದ ಧ್ಯಾನ. ಪೂಜೆ. ಭಕ್ತಿಯ ಬಂಧುರಗಳು.ಸಂಬಂಧಗಳು. ಒಡನಾಟಗಳು.ಪ್ರಕೃತಿಯ ಸಂಬಂಧಗಳು ಮೊದಲಾದವುಗಳು. ಜನಪದ ಸಾಹಿತ್ಯ ಗೀತೆಯ ವಸ್ತುಗಳಾಗಿವೆ. ಹಲವು ದೇವ ದೇವತೆಗಳನ್ನು ಆರಾಧಿದಿದರೂ ದೇವನೊಬ್ಬ ನಾಮ ಹಲವು ಎಂಬ ಸತ್ಯವನ್ನು ಅರಿತವರು ಜನಪದರು. ಜನಪದ ಗೀತೆಗಳಲ್ಲಿ ಭಕ್ತಿಯ ಅಂತರಂಗದ ದರ್ಶನವಾಗಿದೆ. ಆತ್ಮ ಪರಮಾತ್ಮನ ಬೋಧವಾಗಿದೆ.

ಕಂದನ ಕೊಡ ಶಿವನೆ ಬಂಧನ ಬಿಡಲಾರೆ  
ಹಂಗೀನ ಬಾನ ಉಣಲಾರೆ ಮರ್ತ್ಯದಾಗ  
ಬಂಜೆಂಬ ಶಬುದವ ಹೊರಲಾರೆ !

ಸಮಾಜದಲ್ಲಿ ಹೆಣ್ಣಾದವಳು ಮಕ್ಕಳನ್ನು ಪಡೆಯದೇ ಹೋದರೆ ಜನರಾಡುವ ಚುಚ್ಚುಮಾತು. ಬಂಜೆ ಎಂದು ಜರಿಯುವ ರೀತಿ. ನೋಡುವ ನೋಟವನ್ನು ತಾಳಿಕೊಳ್ಳಲಾಗುವುದಿಲ್ಲ. ಹಾಗಾಗಿಯೇ ಶಿವನೇ ಕಂದನ ಕೊಡು ಬಂಜೆಂಬ ಶಬ್ದ ಮಾತ್ರ ಬೇಡವೆಂದು ಬೇಡುವ ರೀತಿ ಆಕೆಯ ಅಂತರಂಗದ ಅಹವಾಲಿಗೆ ಸಾಕ್ಷಿಯಾಗಿದೆ.

ಮಕ್ಕಳೆಂದರೆ ಮನೆಯ ಮುತ್ತು ರತ್ನ ಅವುಗಳು ಅಳು-ನಗು ಮೋಡಿ ಮಾಡುತ್ತದೆ. ಅಸಾಧ್ಯವಾದ್ದನ್ನು ಬೇಕೆನ್ನುವ ಮಕ್ಕಳ ಹಠಮಾರಿತನಕ್ಕೆ ಸಿಡುಕದ ತಾಯಿ ಅದೆಷ್ಟೊಂದು ತಾಳ್ಮೆಯಿಂದ ಸಂತೈಸುವಳೆಂದರೆ ಅದನ್ನು ವರ್ಣಿಸಲು ಪದಗಳೇ ಸಾಲವು ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತಲೂ ಮಿಗಿಲು ಎಂದು ಹೇಳಲಾಗುತ್ತದೆ. ಮನೋರಂಜನೆಯ ಜೊತೆಯಲ್ಲಿಯೇ ಮನವನ್ನು ಅರಳಿಸುವ ಲಾವಣಿ. ಗೀಗೀಪದ. ರಂಗದಪದ. ಕೋಲಾಟ ಪದ. ಸೋಬಾನೆ ಡೊಳ್ಳಿನ ಹಾಡು. ಹಂತಿ ಪದಗಳು ಮೊದಲಾದ ಜನಪದ ಹಾಡುಗಳು ಸಹಸ್ರವಾಗಿ ಕನ್ನಡದಲ್ಲಿವೆ. ಒಂದೊಂದು ಹಾಡು ಒಂದೊಂದು ಸದ್ಗುಣವನ್ನು ಬಿತ್ತುವುದು.

ರಶೀದಾಬಾನು  
ಪ್ರಶಿಕ್ಷಣಾರ್ಥಿ

## ಕನ್ನಡ ಸಾಹಿತ್ಯ ಸಮ್ಮೇಳನಗಳು

| ಕ್ರಮ ಸಂಖ್ಯೆ | ಅಧ್ಯಕ್ಷರ ಹೆಸರು | ಸ್ಥಳ | ವರ್ಷ |
|---|---|---|---|
| 1 | ಹೆಚ್.ವಿ. ನಂಜುಂಡಯ್ಯ | ಬೆಂಗಳೂರು | 1915 |
| 2 | ಹೆಚ್.ವಿ. ನಂಜುಂಡಯ್ಯ | ಬೆಂಗಳೂರು | 1916 |
| 3 | ಹೆಚ್.ವಿ. ನಂಜುಂಡಯ್ಯ | ಮೈಸೂರು | 1917 |
| 4 | ಆರ್. ನರಸಿಂಹಾಚಾರ್ಯ | ಧಾರವಾಡ | 1918 |
| 5 | ಕರ್ಪೂರ ಶ್ರೀನಿವಾಸರಾವ್ | ಹಾಸನ | 1919 |
| 6 | ರೊದ್ದ ಶ್ರೀನಿವಾಸರಾಯ | ಹೊಸಪೇಟೆ | 1920 |
| 7 | ಕೆ.ಪಿ ಪುಟ್ಟಣ್ಣ ಚೆಟ್ಟಿ | ಚಿಕ್ಕ ಮಂಗಳೂರು | 1921 |
| 8 | ಎಂ. ವೆಂಕಟ ಕೃಷ್ಣಯ್ಯ | ದಾವಣಗೆರೆ | 1922 |
| 9 | ಸಿದ್ಧಾಂತಿ ಶಿವಶಂಕರಶಾಸ್ತ್ರಿ | ಬಿಜಾಪುರ | 1923 |
| 10 | ಹೊಸಕೋಟೆ ಕೃಷ್ಣಶಾಸ್ತ್ರಿ | ಕೋಲಾರ | 1924 |
| 11 | ಬೆನಗಲ್ ರಾಮರಾವ್ | ಬೆಳಗಾವಿ | 1925 |
| 12 | ಫ.ಗು.ಹಳಕಟ್ಟಿ | ಬಳ್ಳಾರಿ | 1926 |
| 13 | ಆರ್. ತಾತಾಚಾರ್ಯ | ಮಂಗಳೂರು | 1927 |
| 14 | ಬಿ.ಎಂ.ಶ್ರೀಕಂಠಯ್ಯ | ಕಲ್ಬುರ್ಗಿ | 1928 |
| 15 | ಮಾಸ್ತಿ ವೆಂಕಟೇಶ ಅಯ್ಯಂಗಾರ್ | ಬೆಳಗಾವಿ | 1929 |
| 16 | ಆಲೂರು ವೆಂಕಟರಾವ್ | ಮೈಸೂರು | 1930 |
| 17 | ಮುಳಿಯ ತಿಮ್ಮಪ್ಪಯ್ಯ | ಕಾರವಾರ | 1931 |
| 18 | ಡಿ.ವಿ.ಗುಂಡಪ್ಪ | ಮಡಿಕೇರಿ | 1932 |
| 19 | ವೈ. ನಾಗೇಶ ಶಾಸ್ತ್ರಿ | ಹುಬ್ಬಳ್ಳಿ | 1932 |
| 20 | ಪಂಜೆ ಮಂಗೇಶರಾಯ | ರಾಯಚೂರು | 1934 |
| 21 | ಎನ್.ಎಸ್.ಸುಬ್ಬರಾಯ | ಮುಂಬಯಿ | 1935 |
| 22 | ಬೆಳ್ಳಾವೆ ವೆಂಕಟ ನಾರಾಯಣಪ್ಪ | ಜಮಖಂಡಿ | 1937 |
| 23 | ರಂಗನಾಥ ರಾಮಚಂದ್ರ ದಿವಾಕರ | ಬಳ್ಳಾರಿ | 1938 |
| 24 | ಮುದವಿಡು ಕೃಷ್ಣರಾಯ | ಬೆಳಗಾವಿ | 1939 |
| 25 | ವೈ. ಚಂದ್ರಶೇಖರ ಶಾಸ್ತ್ರಿ | ಧಾರವಾಡ | 1940 |

| | | | |
|---|---|---|---|
| 26 | ಎ.ಆರ್.ಕೃಷ್ಣಶಾಸ್ತ್ರಿ | ಹೈದರಾಬಾದ್ | 1941 |
| 27 | ದ.ರಾ.ಬೇಂದ್ರೆ | ಶಿವಮೊಗ್ಗ | 1943 |
| 28 | ಶಿ.ಶಿ.ಬಸವನಾಳ | ರಬಕವಿ | 1944 |
| 29 | ಟಿ.ಪಿ.ಕೈಲಾಸಂ | ಮದ್ರಾಸ್ | 1945 |
| 30 | ಸಿ.ಕೆ.ವೆಂಕಟರಾಮಯ್ಯ | ಹರಪನಹಳ್ಳಿ | 1947 |
| 31 | ತಿರುಮಲೆ ತಾತಾಚಾರ್ಯ ಶರ್ಮ | ಕಾಸರಗೋಡು | 1948 |
| 32 | ಚನ್ನಪ್ಪ ಉತ್ತಂಗಿ | ಕಲ್ಬುರ್ಗಿ | 1949 |
| 33 | ಎಂ.ಆರ್.ಶ್ರೀನಿವಾಸಮೂರ್ತಿ | ಸೊಲ್ಲಾಪುರ | 1950 |
| 34 | ಎಂ.ಗೋವಿಂದ ಪೈ | ಮುಂಬಯಿ | 1951 |
| 35 | ಎಸ್.ಸಿ.ನಂದೀಮಠ | ಬೇಲೂರು | 1952 |
| 36 | ವಿ.ಸೀತಾಮಯ್ಯ | ಕುಮಟಾ | 1954 |
| 37 | ಕೆ.ಶಿವರಾಮ ಕಾರಂತ | ರಾಯಚೂರು | 1955 |
| 38 | ಆದ್ಯರಂಗಾಚಾರ್ಯ | ಮೈಸೂರು | 1956 |
| 39 | ಕೆ.ವಿ.ಪುಟ್ಟಪ್ಪ | ಧಾರವಾಡ | 1957 |
| 40 | ವಿ.ಕೃ ಗೋಕಾಕ್ | ಬಳ್ಳಾರಿ | 1958 |
| 41 | ಡಿ.ಎಲ್. ನರಸಿಂಹಾಚಾರ್ಯ | ಬಿದರೆ | 1959 |
| 42 | ಅ.ನ.ಕೃಷ್ಣರಾಯ | ಮಣಿಪಾಲ | 1960 |
| 43 | ಕೆ.ಜಿ.ಕುಂದಣಗಾರ | ಗದಗ | 1961 |
| 44 | ರಂ.ಶ್ರೀ.ಮುಗಳಿ | ಸಿದ್ಧಗಂಗೆ | 1963 |
| 45 | ಕಡೆಂಗೋಡ್ಲು ಶಂಕರಭಟ್ಟ | ಕಾರವಾರ | 1965 |
| 46 | ಆ.ನೇ.ಉಪಾಧ್ಯೆ | ಶ್ರವಣಬೆಳಗೊಳ | 1967 |
| 47 | ದೇ.ಜವರೇಗೌಡ | ಬೆಂಗಳೂರು | 1970 |
| 48 | ಜಯದೇವಿ ತಾಯಿ ಲಿಗಾಡೆ | ಮಂಡ್ಯ | 1974 |
| 49 | ಎಸ್.ವಿ.ರಂಗಣ್ಣ | ಶಿವಮೊಗ್ಗ | 1976 |
| 50 | ಜಿ.ಪಿ.ರಾಜರತ್ನಂ | ನವದೆಹಲಿ | 1978 |
| 51 | ಎಂ.ಗೋಪಾಲಕೃಷ್ಣ ಅಡಿಗ | ಧರ್ಮಸ್ಥಳ | 1979 |
| 52 | ಬಸವರಾಜ ಕಟ್ಟೀಮನಿ | ಬೆಳಗಾವಿ | 1980 |

| | | | |
|---|---|---|---|
| 53 | ಪು.ತಿ.ನರಸಿಂಹಾಚಾರ್ | ಚಿಕ್ಕಮಗಳೂರು | 1981 |
| 54 | ಶಂ.ಬಾ.ಜೋಶಿ | ಮಡಿಕೇರಿ | 1981 |
| 55 | ಗೊರೂರು ರಾಮಸ್ವಾಮಿ ಅಯ್ಯಂಗಾರ್ | ಸಿರಸಿ | 1982 |
| 56 | ಎ.ಎನ್.ಮೂರ್ತಿರಾವ್ | ಕೈವಾರ | 1984 |
| 57 | ಹಾ.ಮಾ.ನಾಯಕ್ | ಬೀದರ್ | 1985 |
| 58 | ಸಿದ್ದಯ್ಯ ಪುರಾಣಿಕ್ | ಕಲ್ಬುರ್ಗಿ | 1987 |
| 59 | ಆರ್.ಸಿ.ಹಿರೇಮಠ | ಹುಬ್ಬಳ್ಳಿ | 1989 |
| 60 | ಕೆ.ಎಸ್.ನರಸಿಂಹಸ್ವಾಮಿ | ಮೈಸೂರು | 1990 |
| 61 | ಜಿ. ಎಸ್.ಶಿವರುದ್ರಪ್ಪ | ದಾವಣಗೆರೆ | 1992 |
| 62 | ಸಿಂಪಿ ಲಿಂಗಣ್ಣ | ಕೊಪ್ಪಳ | 1992 |
| 63 | ಚದುರಂಗ | ಮಂಡ್ಯ | 1993 |
| 64 | ಹೆಚ್.ಎಲ್.ನಾಗೇಗೌಡ | ಮುಧೋಳ | 1994 |
| 65 | ಚನ್ನವೀರ ಕಣವಿ | ಹಾಸನ | 1996 |
| 66 | ಕಯ್ಯಾರ ಕಿಇಣ್ಣರೈ | ಮಂಗಳೂರು | 1997 |
| 67 | ಎಸ್.ಎಲ್.ಭೈರಪ್ಪ | ಕನಕಪುರ | 1999 |
| 68 | ಶಾಂತಾದೇವಿ ಮಾಳವಾಡ | ಬಾಗಲಕೋಟೆ | 2000 |
| 69 | ಯು.ಆರ್.ಅನಂತಮೂರ್ತಿ | ತುಮಕೂರು | 2002 |
| 70 | ಪಾಟೀಲ ಪುಟ್ಟಪ್ಪ | ಬೆಳಗಾವಿ | 2003 |
| 71 | ಕಮಲಾ ಹಂಪನಾ | ಮೂಡಬಿದರೆ | 2003 |
| 72 | ಶಾಂತರಸ | ಬೀದರ್ | 2006 |
| 73 | ಕೆ.ಎಸ್.ನಿಸಾರ್ ಅಹಮದ್ | ಶಿವಮೊಗ್ಗ | 2006 |
| 74 | ಎಲ್.ಎಸ್.ಶೇಷಗಿರಿರಾವ್ | ಉಡುಪಿ | 2008 |

| | | | |
|---|---|---|---|
| 75 | ಪ್ರೋ.ಎಲ್. ಬಸವರಾಜು | ಚಿತ್ರದುರ್ಗ | 2009 |
| 76 | ಡಾ.ಗೀತಾ ನಾಗಭೂಷಣ್ | ಗದಗ | 2010 |
| 77 | ಜಿ.ವೆಂಕಟಸುಬ್ಬಯ್ಯ | ಬೆಂಗಳೂರು | 2011 |
| 78 | ಸಿ.ಪಿ.ಕೃಷ್ಣಮೂರ್ತಿ | ಗಂಗಾವತಿ | 2012 |
| 79 | ಕೋ. ಚನ್ನಬಸಪ್ಪ | ಬಿಜಾಪುರ | 2013 |
| 80 | ನಾ.ಡಿಸೋಜಾ | ಮಡಿಕೇರಿ | 2014 |
| 81 | ಡಾ.ಸಿದ್ದಲಿಂಗಯ್ಯ | ಶ್ರವಣಬೆಳಗೊಳ | 2015 |
| 82 | ಡಾ.ಬರಗೂರು ರಾಮಚಂದ್ರ | ರಾಯಚೂರು | 2016 |

ಸೌಮ್ಯ ಎ.ಪಿ
ಪ್ರಶಿಕ್ಷಣಾರ್ಥಿ

# ಅಕ್ಷರಮಾಲೆ ಶಿಕ್ಷಕ

ಅ – ಅಂಧಕಾರವನ್ನು ತೊಲಗಿಸುವವನು.

ಆ – ಆದರ್ಶ ಮೂರ್ತಿಗಳನ್ನು ರೂಪಿಸುವವನು.

ಇ – ಇಂದಿನ ಭಾವಿ ಪ್ರಜೆಗಳ ನಿರ್ಮಾಪಕ.

ಈ – ಈಶನ ಪ್ರತಿರೂಪ ಹೊಂದಿರುವವನು.

ಉ – ಉಪಾಧ್ಯಾಯನೆಂದು ಮತ್ತೊಂದು ನಾಮಾಂಕಿತನು.

ಊ – ಊರಿಗೆ ಹೊಸ ಚೇತನವನ್ನು ತುಂಬುವವನು.

ಋ – ಋಷಿ ಸದೃಶನಾದವನು.

ಎ – ಎಲ್ಲಾ ವಿಷಯಗಳನ್ನು ತಿಳಿದವನು.

ಏ – ಏಕಾಗ್ರತೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವವನು.

ಐ – ಐಕ್ಯತೆಯನ್ನು ಪ್ರತಿರೂಪಿಸುವವನು.

ಒ – ಒಟ್ಟಿಗೆ ಸೇರಿಸಿ ಶಿಕ್ಷಣ ನೀಡುವವನು.

ಓ – ಓಂಕಾರದ ಪ್ರತಿರೂಪ ಶಿಕ್ಷಕ.

ಔ – ಔಧಾರ್ಯವುಳ್ಳವನು.

ಅಂ – ಅಹಂಕಾರವನ್ನು ಅಳಿಸುವವನು.

ಅಃ – ಅಃ ಎಂದು ಅತಿಯಾಗಿ ನಕ್ಕರೆ ತಿದ್ದಿ ಬುದ್ಧಿ ಹೇಳುವವನು.

ಹರೀಶ್ ಲಮಾಣಿ
ಪ್ರಶಿಕ್ಷಣಾರ್ಥಿ.

## ಹಾಸ್ಯ

ವಿಶ್ವ ಹಾಸ್ಯದಿನ ಅಥವಾ ನಗುದಿನ ಹಾಸ್ಯಗಾರರನ್ನು ಸ್ಮರಿಸುವ ದಿನವೂ ಆಗಿದೆ. ರಸಗಳಲ್ಲಿ ಒಂದು ಎಂದು ಪರಿಗಣಿತವಾಗಿರುವ ಹಾಸ್ಯರಸ ನಗುವಿನ ಮೂಲ. ನಕ್ಕು ಹಗುರಾಗು ಎನ್ನುತ್ತೇವೆ ನಗು ದಿವ್ಯೌಷಧ. ನಗುವೇ ಹಾಸ್ಯ. ಹಾಸ್ಯವೇ ನಗು ಎಂದು ಅನೇಕ ಜನರ ತಿಳುವಳಿಕೆಯಾದರೂ ಹಾಸ್ಯ ಬೀಜವನ್ನು ಬಿತ್ತದೇ ನಗು ಪೈರನ್ನು ಬೆಳೆಯುವುದು ಕಷ್ಟಸಾಧ್ಯ. ಹಾಸ್ಯದಿಂದ ಉಕ್ಕುವ ನಗು ವಾಸ್ತವ.

ನಗುವು ಸಹಜದ ಧರ್ಮ. ನಗಿಸುವುದು ಪರಧರ್ಮ
ನಗುವ ಕೇಳುತ ನಗುವುದತಿಶಯದ ಧರ್ಮ
ನಗುವ ನಗಿಸುವ ನಗಿಸಿ ನಗುತ ಬಾಳುವವರ
ಮಿಗೆ ನೀನು ಬೇಡಿಕೊಳೋ – ಮಂಕುತಿಮ್ಮ

ಎಂದು ಹೇಳಿರುವಂತೆ ನಾವು ನಗುತ್ತಾ ಜೀವನ ನಡೆಸಬೇಕು. ಅದೇ ಸಹಜ. ಇತರರನ್ನು ನಗಿಸುವುದೇ ಧರ್ಮ. ನಗುವನ್ನು ಕೇಳುತ್ತಾ ನಗುತ್ತಿರುವುದು ಇದಕ್ಕೂ ಹೆಚ್ಚಿನ ಲಕ್ಷಣ. ದೇವರಲ್ಲಿ ವರವನ್ನು ಬೇಡುವಾಗ ನಗುತ್ತಾ ಜೀವನವನ್ನು ಸಾಗಿಸಿ. ಇತರರನ್ನು ನಗಿಸಿ. ತಾವೂ ನಗುತ್ತಾ ಬಾಳುವ ವರವನ್ನು ಬೇಡಿಕೊಳ್ಳಬೇಕು. ನಿತ್ಯ ಜೀವನದಲ್ಲಿ ಎಷ್ಟೋಂದು ನೋವುಗಳಿರುತ್ತವೆ ನಿಜ. ಆದರೆ ಅವೇ ಶಾಶ್ವತವಲ್ಲ. ಅವು ಮರೆಯಾಗುತ್ತಿರುತ್ತವೆ. ಗೋಳು ಮುಖದಿಂದಲ್ಲ ಮುಕ್ತಿಯನು ಗೆಲುವುದು ವಿರಕ್ತಿ ಪರಿಹಾಸ ಕಥೆಯೊಳು ತೋರಬೇಕು ಆಸಕ್ತಿ ಎಂದಿರುವರು. ಆದುದರಿಂದ ಹಾಸ್ಯ ಕತೆಯಲ್ಲಿ ಹಾಸ್ಯ ಮಾತಿನಲ್ಲಿ ತೊಡಗಿ ನಗಬೇಕು. ನಗುತ್ತಿರಬೇಕು.

ಜಗತ್ತಿನಲ್ಲಿ ಎಷ್ಟೋ ಹಾಸ್ಯಗಾರರು ನಮ್ಮನ್ನು ನಗಿಸಿದ್ದಾರೆ. ನಗಿಸುತ್ತಿದ್ದಾರೆ. ನಾರ್ಮನ್ ವಿಸ್ಡಂ. ಚಾರ್ಲಿ ಚಾಪ್ಲಿನ್. ಲಾರಿನ್ ಹಾರ್ಡಿ. ಮಹಮ್ಮದ್ ಮೊದಲಾದವರು ತಮ್ಮ ಮುಖಭಾವ ಅಭಿನಯದಿಂದ ನಗಿಸಿದರೆ. ಪಿ ಜಿ ವುಡ್ ಹೌಸ್. ರಾಶಿ. ಬೀಚಿ ಮೊದಲಾದವರು ತಮ್ಮ ಹಾಸ್ಯ ಬರಹಗಳು. ನಗೆ ಮಾತುಗಳಿಂದ ನಗಿಸಿರುವರು. ಇಂದು ನಿತ್ಯ ಜೀವನದಲ್ಲಿ ಹಾಸ್ಯ ಹಾಸುಹೊಕ್ಕಾಗಿರಬೇಕು ಎಂದು ವರ್ಷದಲ್ಲಿ ಹಲವು ಸಂದರ್ಭಗಳಲ್ಲಿ ಹಾಸ್ಯೋತ್ಸವಗಳನ್ನು ಏರ್ಪಡಿಸಲಾಗುತ್ತದೆ. ದೂರದರ್ಶನದಲ್ಲಿ ಹಾಸ್ಯಗಾರರು ತಮ್ಮ ಮಾತು ಅಭಿನಯಗಳಿಂದ ನಗಿಸುತ್ತಾರೆ. ಚಲನಚಿತ್ರಗಳಲ್ಲಿ ನಡುನಡುವೆ ಹಾಸ್ಯ ಸನ್ನಿವೇಶಗಳನ್ನು ಅಳವಡಿಸುವುದು ಜನ ನಕ್ಕು ಹಗುರಾಗಿರಲೆಂದೇ. ಇಂದು ಮನುಷ್ಯ ಭಯೋತ್ಪಾದನೆ. ಬೆಲೆ ಏರಿಕೆ. ಟ್ರಾಫಿಕ್ ಜಾಮ್. ಅಧಿಕಾರಕ್ಕಾಗಿ ಕಚ್ಚಾಟ ಮೊದಲಾದ ಕಾರಣಗಳಿಗಾಗಿ ನಗುವುದನ್ನೇ ಮರೆತಿದ್ದಾನೆ. ನಗು ಸ್ವಾಭಾವಿಕ. ವಿಶ್ವ ಹಾಸ್ಯದಿನ ನಮ್ಮನ್ನು ಸದಾ ನಗುನಗುತ್ತಿರುವ ಜೀವನವನ್ನು ನಡೆಸಲು ಎಚ್ಚರಿಸುತ್ತದೆ. ಹಾಸ್ಯಗಾರರು ಹಿಂದೆ ನಾಟಕಗಳಲ್ಲಿ ವಿದೂಷಕರಾಗಿಯೂ ಸರ್ಕಸ್‌ಗಳಲ್ಲಿ ಬಪೂನ್‌ಗಳಾಗಿಯೂ ನಮ್ಮನ್ನು ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದರು. ಜನವರಿ 10 ರಂದು ಹಾಸ್ಯಗಾರರನ್ನು ಹಾಸ್ಯ ಕಲಾವಿದರನ್ನು ಹಾಸ್ಯ ಬರಹಗಾರರನ್ನು ಸ್ಮರಿಸಿ ವಿಶ್ವ ಹಾಸ್ಯದಿನವನ್ನು ಆಚರಿಸಲಾಗುತ್ತದೆ.

ಮಂಜುನಾಥ
ಪ್ರಶಿಕ್ಷಣಾರ್ಥಿ.

# ಜ್ಞಾನಪೀಠ ಪ್ರಶಸ್ತಿಯ ಕುರಿತು

**ಇತಿಹಾಸ :**

ಜ್ಞಾನಪೀಠ ಪ್ರಶಸ್ತಿ ಆರಂಭವಾಗಿದ್ದು 1964ರಲ್ಲಿ. ಖ್ಯಾತ ಸಾಹು ಶಾಂತಿಪ್ರಸಾದ್ ಜೈನ್ ಕುಟುಂಬದವರು ಸ್ಥಾಪಿಸಿರುವ ಭಾರತೀಯ ಜ್ಞಾನಪೀಠ ಪ್ರತಿಷ್ಠಾನ ರಾಷ್ಟ್ರದ ಅತ್ಯುತ್ತಮ ಸಾಹಿತ್ಯ ಸೇವೆಯನ್ನು ಗುರುತಿಸಿ ಪ್ರತಿ ವರ್ಷ ರಾಷ್ಟ್ರದ 18 ಭಾಷೆಗಳ ಪೈಕಿ ಒಂದು ಭಾಷೆಗೆ ಈ ಪ್ರಶಸ್ತಿ ನೀಡುತ್ತಿದೆ. 1965ರಲ್ಲಿ ಪ್ರಪ್ರಥಮ ಜ್ಞಾನಪೀಠ ಪ್ರಶಸ್ತಿ ಪಡೆದವರು ಮಲಯಾಳಂ ಸಾಹಿತಿ ಜಿ. ಶಂಕರ ಕುರುಪ್. 1967ರಲ್ಲಿ ಪ್ರಪ್ರಥಮವಾಗಿ ಕನ್ನಡಕ್ಕೆ ಪ್ರಶಸ್ತಿ ತಂದುಕೊಟ್ಟವರು ರಾಷ್ಟ್ರಕವಿ ಕುವೆಂಪು. ಅವರು "ಶ್ರೀ ರಾಮಾಯಣ ದರ್ಶನಂ" ಕೃತಿಗೆ ಈ ಪ್ರಶಸ್ತಿ ಸಂದಿದೆ. ಮೊದಲು ಈ ಪ್ರಶಸ್ತಿಯನ್ನು ಒಂದು ಕೃತಿಗೆ ನೀಡಲಾಗುತ್ತಿತ್ತು. 1994 ರಿಂದ ಸಾಹಿತಿಯ ಒಟ್ಟಾರೆ ಸಾಧನೆ ಪರಿಗಣಿಸಿ ಸಮಗ್ರ ಸಾಹಿತ್ಯ ಸೇವೆಗಾಗಿ ನೀಡಲಾಗುತ್ತಿದೆ.

**ಪ್ರಶಸ್ತಿಯ ಆಯ್ಕೆ :**

ಜ್ಞಾನಪೀಠ ಪ್ರಶಸ್ತಿಯ ನಿಯಮದಂತೆ ನಿರ್ದಿಷ್ಟ ಸಾಲಿನಲ್ಲಿ ಪ್ರಶಸ್ತಿ ಪಡೆದ ಭಾಷೆಯನ್ನು ಮುಂದಿನ ಮೂರು ವರ್ಷಗಳವರೆಗೆ ಮತ್ತೊಂದು ಜ್ಞಾನಪೀಠ ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ. ಹೀಗಾಗಿ ಮೂರು ಭಾಷೆಗಳು, ಪ್ರತಿ ಸಾಲಿನಲ್ಲಿ ಸ್ಪರ್ಧೆಯ ಪರಿಧಿಯಿಂದ ಆಚೆ ಉಳಿಯುತ್ತದೆ. ಸಾಹಿತಿಗಳು, ಬೋಧಕರು, ವಿಮರ್ಶಕರು, ಓದುಗರು, ವಿಶ್ವವಿದ್ಯಾನಿಲಯಗಳು, ಸಾಹಿತ್ಯ ಮತ್ತು ಭಾಷಾ ಸಂಘ - ಸಂಸ್ಥೆಗಳಿಂದ ಪ್ರಶಸ್ತಿಗೆ ನಾಮಕರಣ ಆಹ್ವಾನಿಸುವ ಮೂಲಕ ಆಯ್ಕೆ ಪ್ರಕ್ರಿಯೆ ಆರಂಭವಾಗುತ್ತದೆ.

ಪ್ರತಿ ಭಾಷೆಗೂ ಸಲಹಾ ಸಮಿತಿಯೊಂದಿರುತ್ತದೆ. ಮೂವರು ಗಣ್ಯ ಸಾಹಿತ್ಯ ವಿಮರ್ಶಕರು, ವಿದ್ವಾಂಸರು ಈ ಸಮಿತಿಯ ಸದಸ್ಯರಾಗಿರುತ್ತಾರೆ. ಜ್ಞಾನಪೀಠಕ್ಕೆ ಬರುವ ಪ್ರಸ್ತಾವನೆಗಳನ್ನು ಈ ಸಮಿತಿಗೆ ಒಪ್ಪಿಸಲಾಗುತ್ತದೆ. ಭಾಷಾ ಸಾಹಿತಿಗಳು ತಾವಾಗಿಯೇ ಸಾಹಿತಿಗಳನ್ನು ನಾಮಕರಣ ಮಾಡಬಹುದು. ಆಯ್ಕೆ ಮಂಡಳಿ ಏಳರಿಂದ ಹನ್ನೊಂದು ಮಂದಿ ಗಣ್ಯ ಸದಸ್ಯರನ್ನು ಹೊಂದಿರುತ್ತದೆ. ಆಯ್ಕೆ ಮಂಡಳಿಯ ನಿರ್ಧಾರವೇ ಅಂತಿಮ.

**ಮೌಲ್ಯ :**

ಜ್ಞಾನಪೀಠ ಪ್ರಶಸ್ತಿಯ ಮೌಲ್ಯ 7 ಲಕ್ಷ ರೂಪಾಯಿ ನಗದು. ಸ್ಮರಣಿಕೆ ಮತ್ತು ಜ್ಞಾನದೇವತೆಯ ಕಂಚಿನ ವಿಗ್ರಹ ಒಳಗೊಂಡಿರುತ್ತದೆ. ಇದುವರೆಗೆ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದ ಕನ್ನಡಿಗರು –

| ಸಾಹಿತಿ/ಕವಿ | ಕೃತಿ/ಸಾಹಿತ್ಯ | ವರ್ಷ |
|---|---|---|
| ಡಾ॥ ಕುವೆಂಪು | ಶ್ರೀ ರಾಮಾಯಣ ದರ್ಶನಂ | 1967 |
| ದ.ರಾ ಬೇಂದ್ರೆ | ನಾಕುತಂತಿ | 1973 |
| ಡಾ॥ ಶಿವರಾಮ ಕಾರಂತ | ಮೂಕಜ್ಜಿಯ ಕನಸು | 1977 |
| ಮಾಸ್ತಿ ವೆಂಕಟೇಶ ಅಯ್ಯಂಗಾರ್ | ಚಿಕ್ಕವೀರ ರಾಜೇಂದ್ರ | 1983 |
| ವಿನಾಯಕ ಕೃಷ್ಣ ಗೋಕಾಕ್ | ಭಾರತ ಸಿಂಧುರಶ್ಮಿ | 1990 |
| ಡಾ॥ ಯು. ಆರ್ ಅನಂತಮೂರ್ತಿ | ಸಮಗ್ರ ಸಾಹಿತ್ಯ | 1994 |
| ಡಾ॥ ಗಿರೀಶ್ ಕಾರ್ನಾಡ್ | ಸಮಗ್ರ ಸಾಹಿತ್ಯ | 1998 |
| ಡಾ॥ ಚಂದ್ರಶೇಖರ ಕಂಬಾರ | ಸಮಗ್ರ ಸಾಹಿತ್ಯ | 2010 |

ಮೇಘನಾ ಎ ಬಿ.
ಪ್ರಶಿಕ್ಷಣಾರ್ಥಿ

## ಕನ್ನಡದ ಮೊದಲುಗಳು

- ✓ ಕನ್ನಡದ ಮೊದಲ ಉಪಲಬ್ಧ ಕೃತಿ – ಕವಿರಾಜ ಮಾರ್ಗ. ಕ್ರಿ. ಶ 450. ಶ್ರೀವಿಜಯ.
- ✓ ಕನ್ನಡದ ಮೊದಲ ಉಪಲಬ್ಧ ಗದ್ಯ ಕೃತಿ – ವಡ್ಡಾರಾಧನೆ. ಶಿವಕೋಟಾಚಾರ್ಯ.
- ✓ ಕನ್ನಡದ ಮೊದಲ ಪುರಾತನ ಶಾಸನ - ಹಲ್ಮಿಡಿ ಶಾಸನ. ಕ್ರಿ. ಶ 450.
- ✓ ಕನ್ನಡದ ಮೊದಲ ನಾಟಕ ಕೃತಿ – ಮಿತ್ರಾವಿಂದ ಗೋವಿಂದ. ಸಿಂಗರಾರ್ಯ.
- ✓ ಕನ್ನಡದ ಮೊದಲ ಉಪಲಬ್ಧ ಜ್ಯೋತಿಷ್ಯ ಕೃತಿ – ಜಾತಕ ತಿಲಕ. ಶ್ರೀಧರಾಚಾರ್ಯ.
- ✓ ಕನ್ನಡದ ಮೊದಲ ಉಪಲಬ್ಧ ಪ್ರವಾಸ ಕೃತಿ - ಪಂಪಾಯಾತ್ರೆ. ಸಿ. ಸೀತಾರಾಮಯ್ಯ.
- ✓ ಕನ್ನಡದ ಮೊದಲ ಜೈನ ಕೃತಿ – ರಾಮಚಂದ್ರ ಚರಿತ ಪುರಾಣ. ನಾಗಚಂದ್ರ.
- ✓ ಕನ್ನಡದ ಮೊದಲ ಗೀತನಾಟಕ – ಮುಕ್ತದ್ವಾರ. ಡಾ. ಶಿವರಾಮ ಕಾರಂತ.
- ✓ ಕನ್ನಡದ ಮೊದಲ ಅಸಂಗತ ನಾಟಕ - ಬೊಕ್ಕ ತಲೆಯ ನರ್ತಕಿ. ಸುಮತೀಂದ್ರ ನಾಡಿಗ್.
- ✓ ಕನ್ನಡದ ಮೊದಲ ಸಾಮಾಜಿಕ ಕಾದಂಬರಿ – ಮಾಡಿದ್ದುಣ್ಣೋ ಮಾರಾಯ. ಎಂ. ಎಸ್ ಪುಟ್ಟಣ್ಣ.
- ✓ ಕನ್ನಡದ ಮೊದಲ ಮನೋವೈಜ್ಞಾನಿಕ ಕಾದಂಬರಿ – ಅಂತರಂಗ. ದೇವುಡು.
- ✓ ಕನ್ನಡದ ಮೊದಲ ರಾಜ – ಮಯೂರವರ್ಮ(ಕದಂಬ).
- ✓ ಕನ್ನಡದ ಮೊದಲ ಪತ್ತೆದಾರಿ ಕಾದಂಬರಿ – ಚೋರಗ್ರಹಣ ತಂತ್ರ. ಎಂ ವೆಂಕಟಕೃಷ್ಣಯ್ಯ.
- ✓ ಕನ್ನಡದ ಮೊದಲ ಮಹಾಕವಿ - ಪಂಪ.
- ✓ ಕನ್ನಡದ ಮೊದಲ ಕವಯಿತ್ರಿ – ಅಕ್ಕಮಹಾದೇವಿ.
- ✓ ಕನ್ನಡದ ಮೊದಲ ಮಹಮ್ಮದೀಯ ಕವಿ - ಸಂತ ಶಿಶುನಾಳ ಶರೀಫ.
- ✓ ಕನ್ನಡದ ಮೊದಲ ರಾಷ್ಟ್ರಕವಿ - ಎಂ ಗೋವಿಂದ ಪೈ.
- ✓ ಕನ್ನಡದ ಮೊದಲ ಚಲನಚಿತ್ರ - ಸತಿ ಸುಲೋಚನ(1934). ವೈ ವಿ ರಾವ್ ನಿರ್ದೇಶನ.
- ✓ ನೋಬೆಲ್ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ - ಸರ್ ಸಿ ವಿ ರಾಮನ್.

ಪ್ರತಿಕ್ಷಾ ಗೌಡ.
ಪ್ರಶಿಕ್ಷಣಾರ್ಥಿ.

# ವಚನಕಾರ್ತಿ ಸತ್ಯಕ್ಕ

ವೀರಶೈವ ಕಾವ್ಯ ಪುರಾಣಗಳಲ್ಲಿ ಜನಪದ ಕಥೆಗಳಲ್ಲಿ ಅತ್ಯಂತ ಜನಪ್ರಿಯಳಾದ ಶಿವಶರಣೆ ಸತ್ಯಕ್ಕ. ಸರ್ವಜ್ಞ, ಮುಪ್ಪಿನ ಷಡಾಕ್ಷರಿ, ಆದಯ್ಯ ಮೊದಲಾದವರು ಈಕೆಯನ್ನು ನೆನೆಯುತ್ತಾರೆ. ಸತ್ಯಕ್ಕಳ ಅತ್ಯುಗ್ರವಾದ ಹರನಿಷ್ಠೆ ಪುರಾಣಿಕರಿಗೆ ಒಂದು ಸೊಗಸಿನ ವಿಷಯ. ಇವಳ ಇಷ್ಟದೇವತೆ ಶಂಭುಜಕ್ಕೇಶ್ವರ. ಹಿರೆಜಂಬೂರಿನ ಸ್ಥಾನೀಯ ದೇವತೆ. ಹಿರೆಯ ಜಂಬೂರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಒಂದು ಹಳ್ಳಿ. ಅಲ್ಲಿ ಸತ್ಯಕ್ಕಳ ವಿಗ್ರಹವನ್ನು ಸ್ಥಾಪಿಸಲಾಗಿದೆ. ಶಿವಭಕ್ತರ ಮನೆಯ ಕಸಗುಡಿಸು ಕಾಯಕಜೀವಿ ಈಕೆ. ಸತ್ಯಕ್ಕ ವಿವಾಹಿತಳಾಗಿದ್ದಂತೆ ತೋರುವುದಿಲ್ಲ. ಶಿವನನ್ನೆ ಪತಿ ಎಂದು ಸತಿಭಾವದ ವಚನಗಳನ್ನು ಹೇಳಿದ್ದಾಳೆ. ವಚನಗಳ ಅಂಕಿತ ಶಂಭುಜಕ್ಕೇಶ್ವರ ಎಂಬುದು; ದೊರೆತ ವಚನಗಳು ಇಪ್ಪತ್ತೊಂಬತ್ತು. ಈಕೆಯ ಅನೇಕ ವಚನಗಳು ಪ್ರಶ್ನಾರ್ಥಕ ವಾಕ್ಯಗಳಿಂದಲೇ ಆರಂಭವಾಗುತ್ತವೆ. ನಿಂದಾಸ್ತುತಿಯ ಮೂಲಕವೇ ದೇವರನ್ನು ನೆನೆಯುತ್ತಾಳೆ.

ಹೆಣ್ಣು ಗಂಡು ಎಂಬ ಭೇದವನ್ನು ಅಲ್ಲಗಳೆಯುವ ಈಕೆಯ ಪ್ರಸಿದ್ಧ ವಚನ ಹೀಗಿದೆ.

ಮೊಲೆ ಮುಡಿ ಇದ್ದುದೆ ಹಣ್ಣೆಂದು ಪ್ರಮಾಣಿಸಲಲ್ಲ
ಕಾಸೆ ಮೀಸೆ ಕಠಾರವಿದ್ದುದೆ ಗಂಡೆಂದು ಪ್ರಮಾಣಿಸಲಲ್ಲ
ಅದು ಜಗದ ಹಾಹೆ, ಬಲ್ಲವರ ನೀತಿಯಲ್ಲ.
ತೆರೆ ಹೆಣ್ಣಾದಡೂ ಮಧುರವೆ ಕಾರಣ.
ಅಂದವಿಲ್ಲದ ಕುಸುಮಕ್ಕೆ ವಾಸನೆಯೇ ಕಾರಣ
ಇದರಿಂದವ ನೀನೆ ಬಲ್ಲೆ ಶಂಭುಜಕ್ಕೇಶ್ವರಾ .

ಹೆಣ್ಣಿನ ಜೀವನ ಮೌಲ್ಯಗಳಿಗೆ ಸಂಬಂಧಿಸಿದ ಸ್ತ್ರೀ ಪ್ರಜ್ಞೆ ಈಕೆಯಲ್ಲಿ ಜಾಗೃತವಿರುವುದು ಕಂಡುಬರುತ್ತದೆ. ಗಂಡಿಗೊಂದು ನೀತಿ ಹೆಣ್ಣಿಗೊಂದು ನೀತಿ ಎಂಬುದು ಸರಿಯೇ ಎಂದು ಈಕೆ ದೇವರನ್ನೇ ಪ್ರಶ್ನಿಸುವ ವಚನದಲ್ಲಿ ಸರಳವಾದ ಮನಸ್ಸನ್ನು ನಾವು ಕಂಡುಕೊಳ್ಳುತ್ತೇವೆ. ದೇವರಿಗೆ ಹಾಕಿದ ಪ್ರಶ್ನೆ ಹೀಗಿದೆ.

ಹಿರಿಯತನಕ್ಕೆ ಪಥವೇ
ಬಾಣನ ಮನೆಯ ಬಾಗಿಲ ಕಾಯ್ವುದು?
ಮಹಂತನಕ್ಕೆ ಪಥವೆ
ನಂಬಿಗೆ ಕುಂಟಣಿಯಾದುದು?
ಕರುಣಿತನಕ್ಕೆ ಪಥವೆ.
ಸಿರಿಯಾಳನ ಮಗನ ಕೊಲುವುದು?
ದಾನಿತನಕ್ಕೆ ಪಥವೆ.
ದಾಸನ ವಸ್ತ್ರವ ಸೀಳುವುದು।
ನಿಮ್ಮ ಹಿರಿಯತನಕ್ಕಿದು ಪಥವೆ.
ಬಲ್ಲಾಳನ ವಧುವ ಬೇಡುವುದು?
ನಾರಿಯರಿಬ್ಬರೊಡನೆ ಇಪ್ಪುದು? ಶಿವಾ ಶಿವಾ ನಿಮ್ಮ ನಡಾವಳಿ.

ಮೇಲಿನ ವಚನದಲ್ಲಿ ಸತ್ಯಕ್ಕ ಶಿವನಾದರೂ ಏನು, ಬಲ್ಲಾಳನ ವಧುವನ್ನು ಬೇಡಿದ್ದು ನಾರಿಯರಿಬ್ಬರೊಡನೆ ಇರುವುದು ಅವಳಿಗೆ ಒಪ್ಪಿಗೆಯಾಗಿಲ್ಲ. ಅಂತೆಯೇ ಹೆಣ್ಣಿಗೊಂದು ನೀತಿ ಗಂಡಿಗೊಂದು ನೀತಿ ಸಲ್ಲದು ಎಂದು ಆಲೋಚಿಸುತ್ತಳೆ.

ಪರಮಾತ್ಮ, ಪರಬ್ರಹ್ಮ, ಪರವಸ್ತು, ನಾದಬಿಂದು, ಕಳಾತೀತನೇ ಇರಬಹುದು, ಏನಾದರೂ ಇರಬಹುದು. ಆದರೆ ಸದ್ಭಕ್ತರ ಇಚ್ಛೆಯನ್ನರಿತು ಬಂದವನೇ ದೇವರು, ಎನ್ನುವುದರ ಮೂಲಕ ಆಕೆ ಗ್ರಹಿಸಿದ್ದಾಳೆ. ಆಕೆಯ ಸತಿ ಪತಿ ಭಾವದ ವಚನಗಳಲ್ಲಿ ಒಂದು ವಚನ ತನ್ನ ಗಂಡ ಜಗತ್ತಿನ ಗಂಡರಿಗೆ ಗಂಡನಾದವನು ಗಂಡರಗಂಡ. ಎದೆಯನ್ನು ಮೆಟ್ಟಿದವನು ಗಂಡು ವೇಷದ ಶಕ್ತಿರೂಪಿ ಎಂದಿರುವಳು. ಇಲ್ಲಿ ಆಕೆ ಗಂಡಿಗೆ ಶಕ್ತಿರೂಪವನ್ನು ಆರೋಪಿಸಿರುವುದು ಮೆಚ್ಚುವ ಅಂಶ. ಸತ್ಯಕ್ಕನ ಸತಿ-ಪತಿ ಭಾವದ ವಚನಗಳಲ್ಲಿ ಮಹಾದೇವಿಯಕ್ಕಗಳ ಪ್ರಭಾವವನ್ನು ಬಿಂಬಿಸುವ ಆಕೆಯ ಶೈಲಿಯಲ್ಲಿ ಅನುಕರಣೆಗಿಂತ ಅನುಸರಣೆಯೇ ಪ್ರಧಾನವಾಗಿದೆ.

ಇನಿಯಂಗೆ ತವಕವಿಲ್ಲ ಎನಗೆ ಸ್ಮರಣೆಯಿಲ್ಲ ಮನದಿಚ್ಛೆಯ ಅರಿವ ಸಖಿಯರಿಲ್ಲ
ಭಾವನೇಕೆ ಬಾರನೆನ್ನಮನೆಗೆ, ಏಕೆನ್ನ ಭವ ಭವಂಗಳಲಿ ಬರಿಸಿದೆ.

ಇಂಥಹ ಸತಿ ಭಾವದ ವಚನಗಳಲ್ಲಿ ಬಿಂಬಿಸುವ ಭಾವದ ಉತ್ಕಟತೆಯನ್ನು ಗಮನಿಸಿದಾಗ ಸತ್ಯಕ್ಕನಿಗೆ ಕವಿತ್ವ ಸಾಧಿಸಿದೆ ಎನಿಸುತ್ತದೆ. ಸತ್ಯಕ್ಕ ತನ್ನ ಭಕ್ತಿಯ ಪರಮ ಮೌಲ್ಯವನ್ನು ಕಂಡುಕೊಂಡಿರುವುದು ನಿಸ್ಪಹವೂ ಪ್ರಾಮಾಣಿಕವೂ ಆದ ಶುದ್ಧವಾದ ಕಾಯಕವನ್ನು ನಡೆಸುವುದರಲ್ಲಿ. ಹಾಗೆಂದ ಆಕೆ ತನ್ನ ನಿಲುವನ್ನು ಈ ರೀತಿ ವ್ಯಕ್ತಪಡಿಸುತ್ತಾಳೆ.

ಲಂಚನ ವಂಚನಕ್ಕೆ ಕೈಯಾನದ ಭಾಷೆ......
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದಡೆ ನಾ ಕೈಯತ್ತಿ ಮುಟ್ಟಿ ಎತ್ತಿದೆನಾದಡೆ
ನಿಮ್ಮಾಣೆ ನೀವಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯಾ ಶಂಬುಜಕ್ಕೇಶ್ವರ ದೇವಯ್ಯಾ, ನಿಮ್ಮಾಣೆ.

ಸತ್ಯಕ್ಕ ತನಗೆ ಭಕ್ತಿಜೀವನದಲ್ಲಿ ಆದರ್ಶರಾದವರನ್ನು ನೆನೆದಿದ್ದಾಳೆ. ಅವರು ಬಿಲ್ಲಮರಾಯ, ಗೊಲ್ಲಾಳರಾಯ, ಕೆಂಬಾವಿಭೋಗಣ್ಣ, ಬಳ್ಳೇಶ್ವರ ಮಲ್ಲಯ್ಯ, ಬಲ್ಲಾಳರು, ಬಿಬ್ಬಿಬಾಚಯ್ಯಗಳು, ಮರುಳಶಂಕರದೇವರು. ಸ್ವಕ್ಕ ತನ್ನನ್ನು ಜನ ಶಿವಶರಣೆ, ಹರಶರಣೆ ಎಂದು ಕರೆದು ಯಾರೂ ಹಿರಿತನವನ್ನು ಕೊಡುವುದು ಬೇಡ. ಲೋಕ ಹೇಗಾದರೂ ತಿಳಿಯಲಿ ತಾನು ಸಾಧಿಸಿದ ಭಕ್ತಿಯ ಮೂಲಕ ಮತ್ತೆ ಮತ್ತೆ ಜನನ ಮರಣಗಳಲ್ಲಿ ಬಾರದಿದ್ದರೆ ಸಾಕು ಎಂದು ನಂಬುವ ತನ್ನ ನೈತಿಕ ಪ್ರಜ್ಞೆಯನ್ನು ಉಳಿಸಿಕೊಂಡು ಬಾಳುವೆಯನ್ನು ನಡೆಸುವ ವಿಶಿಷ್ಟತೆಯನ್ನು ತೋರತ್ತಾಳೆ.

ಶಿಲ್ಪಾ ಪಿ
ಪ್ರಶಿಕ್ಷಣಾರ್ಥಿ

# ಕುವೆಂಪು


**ಪರಿಚಯ** : ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ

**ಜನನ** : ಡಿಸೆಂಬರ್ 29, 1904 ಹಿರೇಕೊಡಿಗೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. ತಂದೆ ವೆಂಕಟಪ್ಪ ಗೌಡ, ತಾಯಿ ಸೀತಮ್ಮ. ಬಾಲ್ಯದ ಕಾವ್ಯನಾಮ ಕಿಶೋರ ಚಂದ್ರವಾಣಿ. ನಂತರ ಕುವೆಂಪು ಎಂದು ಬದಲಾಯಿತು. ಇವರ ವೃತ್ತಿ ಹಾಗೂ ಪ್ರವೃತ್ತಿ – ಕವಿ, ಲೇಖಕ, ಅಧ್ಯಾಪಕ, ಪ್ರಾಂಶುಪಾಲ ಹಾಗೂ ಕುಲಪತಿಯಾಗಿ ಸೇವೆಗೈದಿದ್ದಾರೆ. ಇವರ **ಸಾಹಿತ್ಯ ಶೈಲಿ** – ಸಣ್ಣಕತೆ, ಕವಿತೆ, ಕಾದಂಬರಿ, ನಾಟಕ, ವಿಮರ್ಶೆ, ಆತ್ಮಕತೆ, ಜೀವನ ಚರಿತ್ರೆ, ಮಹಾಕಾವ್ಯ, ಪ್ರೇಮ, ದೇಶಪ್ರೇಮ, ಪ್ರಕೃತಿ, ಆದ್ಯಾತ್ಮ, ವಿಚಾರ, ಸಾಹಿತ್ಯ ಚಳುವಳಿ ಹಾಗೂ ನವೋದಯ. ಇವರು ತಮ್ಮ ಅಧ್ಯಯನವನ್ನು ತೀರ್ಥಹಳ್ಳಿ, ಮೈಸೂರು ಹಾಗೂ ಉನ್ನತ ಶಿಕ್ಷಣವನ್ನು ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಪೂರ್ಣಗೊಳಿಸಿದರು ಹಾಗೂ ಟಿ ಎಸ್ ವೆಂಕಣ್ಣಯ್ಯ ಇವರ ಗುರುಗಳಾಗಿದ್ದರು

ಇವರಿಗೆ ಸಂದ ಪ್ರಮುಖ **ಪ್ರಶಸ್ತಿಗಳು** – ರಾಷ್ಟ್ರಕವಿ ಪ್ರಶಸ್ತಿ,ಜ್ಞಾನಪೀಠ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಪಂಪ ಪ್ರಶಸ್ತಿ. ಇವರ ಬಾಳ ಸಂಗಾತಿ ಹೇಮಾವತಿ, ಮಕ್ಕಳೆಂದರೆ ಪೂರ್ಣಚಂದ್ರ ತೇಜಸ್ವಿ, ಕೋಕಿಲೋದಯ ಚೈತ್ರ, ಇಂದುಕಲಾ ಮತ್ತು ತಾರಿಣಿ.

**ಮರಣ** : ಸೆಪ್ಟಂಬರ್ 11, 1994. ಇವರ ಅಂತ್ಯ ಸಂಸ್ಕಾರವನ್ನು ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯಲ್ಲಿ ಕೈಗೊಳ್ಳಲಾಗಿದೆ. ಇವರ ಸಾಧನೆಯ ನೆನಪಿಗೆ ಅವರ ಮನೆಯನ್ನು ಕವಿಶೈಲ ಎಂಬ ನಾಮಕರಣದಿಂದ ಒಂದು ವಸ್ತುಸಂಗ್ರಹಾಲಯವಾಗಿ ಮಾರ್ಪಡಿಸಿ ಅವರ ಜೀವನ ಸಾಧನೆಯ ಅನಾವರಣ ಮಾಡಲಾಗಿದೆ.

ಅವರ **ಸಹಿ** –




ಕುವೆಂಪು ಕನ್ನಡದ ಅಗ್ರಮಾನ್ಯ ಕವಿ, 20ನೇ ಶತಮಾನ ಕಂಡ ದೈತ್ಯ ಪ್ರತಿಭೆ. ವರಕವಿ ಬೇಂದ್ರೆಯವರು ಇವರನ್ನು 'ಯುಗದ ಕವಿ ಜಗದ ಕವಿ' ಎಂದಿದ್ದಾರೆ. ವಿಶ್ವ ಮಾನವ ಸಂದೇಶವನ್ನು ನೀಡಿದ ಇವರು ಕನ್ನಡದ ಎರಡನೇ ರಾಷ್ಟ್ರಕವಿ. ಕುವೆಂಪು ಕನ್ನಡ ಸಾಹಿತ್ಯಕ್ಕೆ ನೀಡಬಹುದಾದ ಎಲ್ಲಾ ಪ್ರಶಸ್ತಗಳನ್ನು ತಾವೇ ಮೊದಲ ಬಾರಿಗೆ ಪಡೆದಿರುವುದು ಅವರ ಸಾಹಿತ್ಯ ಸಾಧನೆಯನ್ನು ಎತ್ತಿ

ತೋರಿಸುತ್ತದೆ. ಮೈಸೂರು ವಿಶ್ವ ವಿದ್ಯಾಲಯದ ಉಪ ಕುಲಪತಿಯಾಗಿ ನಿವೃತ್ತರಾದ ಇವರು ಮೈಸೂರಿನ ಒಂಟಿಕೊಪ್ಪಲಿನಲ್ಲಿರುವ 'ಉದಯರವಿ' ಯಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆದರು.



ಪ್ರಾಧ್ಯಾಪಕರಾಗಿ ಕುವೆಂಪು



ಕುವೆಂಪು ವಾಸವಿದ್ದ ಮನೆ 'ಉದಯರವಿ' (ಮೈಸೂರು)

**ಸಾಹಿತ್ಯ ಕೃಷಿ** :

ಕುವೆಂಪು ಅವರು 20ನೇ ಶತಮಾನದ ಸಾಹಿತ್ಯ ಕ್ಷೇತ್ರದ ದೈತ್ಯ ಪ್ರತಿಭೆ. ಅವರೊಬ್ಬ 'ರಸಋಷಿ' ತಮ್ಮ ಮೇರು ಕೃತಿ 'ಶ್ರೀ ರಾಮಾಯಣ ದರ್ಶನಂ' ನಲ್ಲಿ ಈ ಕಾಲಕ್ಕೆ ಅಗತ್ಯವಾದ ದರ್ಶನವನ್ನು ನೀಡಿದ್ದಾರೆ. ಅವರ ಎರಡು ಬೃಹತ್ ಕಾದಂಬರಿಗಳಾದ 'ಕಾನೂರು ಹೆಗ್ಗಡತಿ' ಹಾಗೂ 'ಮಲೆಗಳಲ್ಲಿ ಮದುಮಗಳು' ಅವರನ್ನು ಜಗತ್ತಿನ ಮಹಾನ್ ಕಾದಂಬರಿಕಾರರ ಸಾಲಿನಲ್ಲಿ ನಿಲ್ಲುವಂತೆ ಮಾಡಿವೆ. ಅವರ ನಾಟಕಗಳಿಗೆ ವೈಚಾರಿಕತೆಯ ಸ್ಪರ್ಶವಿದೆ.

**ಕೃತಿಗಳು** :

**ಮಹಾಕಾವ್ಯ** : ಶ್ರೀ ರಾಮಾಯಣ ದರ್ಶನಂ (1949)

**ಖಂಡಕಾವ್ಯ** : ಚಿತ್ರಾಂಗದಾ (1936)

**ಕವನ ಸಂಕಲನಗಳು** :

1. ಕೊಳಲು (1930)
2. ಪಾಂಚಜನ್ಯ (1933)
3. ನವಿಲು (1934)
4. ಕಲಾಸುಂದರಿ (1934)
5. ಕಥನ ಕವನಗಳು (1937)
6. ಕೋಗಿಲೆ ಮತ್ತು ಸೋವಿಯಟ್ ರಷ್ಯಾ (1944)
7. ಪ್ರೇಮ ಕಾಶ್ಮೀರ (1946)
8. ಅಗ್ನಿಹಂಸ (1946)
9. ಕೃತ್ತಿಕೆ (1946)
10. ಪಕ್ಷಿಕಾಶಿ (1946)
11. ಕಿಂಕಿಣಿ (ವಚನ ಸಂಕಲನ) (1946)
12. ಷೋಡಶಿ (1946)
13. ಚಂದ್ರಮಂಚಕೆ ಬಾ ಚಕೋರಿ (1957)
14. ಇಕ್ಷುಗಂಗೋತ್ರಿ (1957)
15. ಅನಿಕೇತನ (1963)
16. ಜೇನಾಗುವ (1964)

17. ಅನುತ್ತರಾ (1965)
18. ಮಂತ್ರಾಕ್ಷತೆ (1966)
19. ಕದರಡಕೆ (1967)
20. ಪ್ರೇತಕ್ಯೂ (1967)
21. ಕುಟೀಚಕ (1967)
22. ಹೊನ್ನ ಹೊತ್ತಾರೆ (1976)
23. ಕೊನೆಯ ತೆನೆ ಮತ್ತು ವಿಶ್ವಮಾನವ ಸಂದೇಶ (1981)

**ಕಥಾ ಸಂಕಲನ**

1. ಸಂನ್ಯಾಸಿ ಮತ್ತು ಇತರ ಕಥೆಗಳು (1936)
2. ನನ್ನ ದೇವರು ಮತ್ತು ಇತರ ಕಥೆಗಳು (1940)

**ಕಾದಂಬರಿಗಳು**

1. ಕಾನೂರು ಹೆಗ್ಗಡತಿ (1936)
2. ಮಲೆಗಳಲ್ಲಿ ಮದುಮಗಳು.(1967)

**ನಾಟಕಗಳು**

1. ಯಮನ ಸೋಲು (1928)
2. ಜಲಗಾರ (1928)
3. ಬಿರುಗಾಳಿ (1930)
4. ವಾಲ್ಮೀಕಿಯ ಭಾಗ್ಯ (1931)
5. ಮಹಾರಾತ್ರಿ (1931)
6. ಸ್ಮಶಾನ ಕುರುಕ್ಷೇತ್ರಂ (1931)
7. ರಕ್ತಾಕ್ಷಿ (1933)
8. ಶೂದ್ರ ತಪಸ್ವಿ (1944)
9. ಬೆರಳ್‌ಗೆ ಕೊರಳ್ (1947)
10. ಬಲಿದಾನ (1948)
11. ಚಂದ್ರಹಾಸ (1963)
12. ಕಾನೀನ (1974)

**ಪ್ರಬಂಧ**

1. ಮಲೆನಾಡಿನ ಚಿತ್ರಗಳು (1933)

**ಆತ್ಮಕಥೆ**

1. ನೆನಪಿನ ದೋಣಿಯಲ್ಲಿ: ಕುವೆಂಪು ಮದುವೆ ಪ್ರಸಂಗ

**ವಿಮರ್ಶೆ**

1. ಕಾವ್ಯವಿಹಾರ (1946)
2. ತಪೋನಂದನ (1950)
3. ವಿಭೂತಿಪೂಜೆ (1953)
4. ದ್ರೌಪದಿಯ ಶ್ರೀಮುಡಿ (1960)
5. ರಸೋ ವೈ ಸಃ (1963)

**ಜೀವನ ಚರಿತ್ರೆಗಳು**

1. ಸ್ವಾಮಿ ವಿವೇಕಾನಂದ
2. ರಾಮಕೃಷ್ಣ ಪರಮಹಂಸ

**ಅನುವಾದ**

1. ಗುರುವಿನೊಡನೆ ದೇವರಡಿಗೆ (ಭಾಗ 1, 2) (1954)
2. ಕೊಲಂಬೋ ಇಂದ ಆಲ್ಮೋರಕ

**ಭಾಷಣ-ಲೇಖನ**

1. ಸಾಹಿತ್ಯ ಪ್ರಚಾರ (1930)
2. ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ (1944)
3. ಷಷ್ಠಿನಮನ (1964)
4. ಮನುಜಮತ-ವಿಶ್ವಪಥ (1971)
5. ವಿಚಾರ ಕ್ರಾಂತಿಗೆ ಆಹ್ವಾನ (1976)

**ಶಿಶು ಸಾಹಿತ್ಯ**

1. ಅಮಲನ ಕಥೆ (1924)
2. ಮೋಡಣ್ಣನ ತಮ್ಮ (ನಾಟಕ) (1926)
3. ಹಾಳೂರು (1926)
4. ಬೊಮ್ಮನಹಳ್ಳಿಯ ಕಿಂದರಿಜೋಗಿ (1928)
5. ನನ್ನ ಗೋಪಾಲ (ನಾಟಕ) (1930)
6. ನನ್ನ ಮನೆ (1946)
7. ಮೇಘಪುರ (1947)
8. ಮರಿವಿಜ್ಞಾನಿ (1947)
9. ನರಿಗಳಿಗೇಕೆ ಕೋಡಿಲ್ಲ (1977)

**ಇತರ**

1. ಜನಪ್ರಿಯ ವಾಲ್ಮೀಕಿ ರಾಮಾಯಣ

**ಆಯ್ದ ಸಂಕಲನಗಳು**

1. ಕನ್ನಡ ಡಿಂಡಿಮ (1968)
2. ಕಬ್ಬಿಗನ ಕೈಬುಟ್ಟಿ (1973)
3. ಪ್ರಾರ್ಥನಾ ಗೀತಾಂಜಲಿ (1972)

**ಕೊಡುಗೆ**

1. ಕುವೆಂಪು ಅವರು ಯುಗಪ್ರವರ್ತಕ ಕವಿ.
2. ಕುವೆಂಪು ಅವರು 'ಶ್ರೀ ರಾಮಾಯಣ ದರ್ಶನಂ' ರಚಿಸುವ ಮೂಲಕ ಆಧುನಿಕ ಕಾಲದಲ್ಲಿ ಮಹಾಕಾವ್ಯ ರಚನೆಗೆ ನಾಂದಿ ಹಾಡಿದರು.
3. ಕುವೆಂಪು ಅವರು ತಮ್ಮ ಮೇರು ಕೃತಿ 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಹೊಸ ಕಾಲಕ್ಕೆ ಅಗತ್ಯವೆನ್ನಿಸಿದ ದರ್ಶನವನ್ನು ಕಟ್ಟಿಕೊಟ್ಟಿದ್ದಾರೆ.
4. ಕುವೆಂಪು ಅವರು ವಿಶ್ವಮಾನವ ಸಂದೇಶ ನೀಡಿದ್ದಾರೆ.
5. ಕುವೆಂಪು ಅವರು ಮಂತ್ರಮಾಂಗಲ್ಯ ಎಂಬ ಸರಳ ವಿವಾಹ ಪದ್ಧತಿಯನ್ನು ರೂಢಿಗೆ ತಂದರು.
6. ಕುವೆಂಪು ಅವರು ತಮ್ಮ ಕನಸಿನ ಕೂಸಾದ ಮಾನಸ ಗಂಗೋತ್ರಿಯನ್ನು ಕಟ್ಟಿ ಬೆಳೆಸಿದ್ದಾರೆ.
7. ಕುವೆಂಪು ಅವರು ದಲಿತ ಹಾಗೂ ಬಂಡಾಯ ಚಳವಳಿಗಳಿಗೆ ಸ್ಫೂರ್ತಿಯಾಗಿದ್ದಾರೆ.

**ಗೌರವ /ಪ್ರಶಸ್ತಿ /ಪುರಸ್ಕಾರಗಳು :**

1. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ - (ಶ್ರೀರಾಮಾಯಣ ದರ್ಶನಂ) (1955)
2. ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಿ.ಲಿಟ್. (1956)
3. ಪದ್ಮಭೂಷಣ (೧೯೫೮)
4. ರಾಷ್ಟ್ರಕವಿ ಪುರಸ್ಕಾರ (೧೯೬೪)
5. ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್. (೧೯೬೬)

6. ಜ್ಞಾನಪೀಠ ಪ್ರಶಸ್ತಿ (ಶ್ರೀ ರಾಮಾಯಣ ದರ್ಶನಂ) (೧೯೬೮)
7. ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್. (೧೯೬೯)
8. ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಷಿಪ್ (1979)
9. ಪಂಪ ಪ್ರಶಸ್ತಿ (೧೯೮೮)
10. ಪದ್ಮವಿಭೂಷಣ (೧೯೮೯)
11. ಕರ್ನಾಟಕ ರತ್ನ (೧೯೯೨)
12. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ
13. ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ (ಮರಣೋತ್ತರ)

**ಅಧ್ಯಕ್ಷತೆ, ಇತ್ಯಾದಿ**

1. 1928ರಲ್ಲಿ ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ಆಶ್ರಯದಲ್ಲಿ ನಡೆದ ವಿದ್ಯಾರ್ಥಿ ಕವಿ ಸಮ್ಮೇಳನದ ಅಧ್ಯಕ್ಷರಾಗಿದ್ದರು.
2. ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು.
3. 1957ರಲ್ಲಿ ನಡೆದ 39ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.
4. 1985ರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನವನ್ನು ಉದ್ಘಾಟಿಸಿದರು.

**ವಿಶ್ವ ಮಾನವ ದಿನ**

ಕರ್ನಾಟಕ ಸರ್ಕಾರವು ೨೦೧೫ರ ಡಿಸೆಂಬರ್‌ನಲ್ಲಿ ಕುವೆಂಪು ಜನ್ಮದಿನವಾದ ಡಿಸೆಂಬರ್ ೨೯ ಅನ್ನು "ವಿಶ್ವ ಮಾನವ" ದಿನವನ್ನಾಗಿ ಆಚರಿಸುವುದಾಗಿ ಆದೇಶ ಹೊರಡಿಸಿತು. ಈ ಮೂಲಕ ವಿಶ್ವಮಾನವ ಸಂದೇಶ ಸಾರಿದ ಕವಿಗೆ ಮತ್ತೊಂದು ಗೌರವ ಸಂದಾಯವಾದಂತಾಯ್ತು.

ಒಟ್ಟಾರೆಯಾಗಿ ಕುವೆಂಪುರವರು ಸಾಹಿತ್ಯ ಬೃಹನ್ಮೂರ್ತಿ. ಕಾವ್ಯ ಮೀಮಾಂಸೆಯ ಯಾವೊಂದು ಸರಳ ಸೂತ್ರವೂ ಅವರನ್ನು ಸಂಪೂರ್ಣವಾಗಿ ವಿವರಿಸಲಾರದು. ಏಕೆಂದರೆ ಅವರ ಕೃತಿಗಳು ನಗ್ನ ಸತ್ಯವನೆಂತೋ ಅಂತೆ ಅತೀತ ಸತ್ಯವನ್ನು ಅನಾವರಣಗೊಳಿಸುತ್ತವೆ. ಸೃಜನಾತ್ಮಕ ಜೀವನ ಚರಿತ್ರೆ, ಸಾಹಿತ್ಯ ವಿಮರ್ಶೆ, ಕಾವ್ಯ ಮೀಮಾಂಸೆ, ನಾಟಕ ಮತ್ತು ಕತೆ, ಕಾದಂಬರಿಯ ಕ್ಷೇತ್ರಗಳಿಗೆ ಅವರ ಕೊಡುಗೆ ಸ್ಮರಣೀಯವಾದುದು. ಅವರದು ವ್ಯಷ್ಟಿ ವಾಣಿಯಲ್ಲ: ಯುಗಧರ್ಮ, ಜನಾಂಗ ಧರ್ಮಗಳ ವಾಣಿ. ಹೀಗಾಗಿ ಅವರು ತಮ್ಮ ಸಾಹಿತ್ಯದ ಮೂಲಕ ಯುಗ ಯುಗಕ್ಕೂ ಚಿರಂಜೀವಿಯಾಗಿರುತ್ತಾರೆ. ಈ ಸ್ವರೂಪದ ಬದುಕು ಬಹು ಪೀಳಿಗೆಗೆ ಮಾದರಿ ಹಾಗೂ ಆದರ್ಶಪ್ರಾಯ.

**ಕನ್ನಡಕ್ಕೆ ಅವರ ಘೋಷಣೆಗಳು :**

"ಕನ್ನಡಕ್ಕಾಗಿ ಕೈ ಎತ್ತು,

ನಿನ್ನ ಕೈ ಕಲ್ಪವೃಕ್ಷವಾಗುತ್ತದೆ".

**"ಕನ್ನಡವೇ ಸತ್ಯ**


**ಕನ್ನಡವೇ ನಿತ್ಯ".**

**"ಬಾರಿಸು ಕನ್ನಡ ಡಿಂಡಿಮವ,**

**ಓ ಕರ್ನಾಟಕ ಹೃದಯ ಶಿವ".**

"ಎಲ್ಲಾದರೂ ಇರು, ಎಂತಾದರೂ ಇರು,

ಎಂದೆಂದಿಗೂ ನೀ ಕನ್ನಡವಾಗಿರು".




ನವೀನಾ ಕುಮಾರಿ
ಪ್ರಶಿಕ್ಷಣಾರ್ಥಿ.

ಭಾಷಾ ಸಂಘದ ಚಟುವಟಿಕೆಗಳ ಚಿತ್ರ ಸಂಗ್ರಹ



















